ಜನಮನದ ದನಿ

# ಪ್ರಜೋದಯ


ಸಂಪಾದಕ : ಜೆ.ಆರ್. ಕೆಂಚೇಗೌಡ




ಈಡನ್ ಗಾರ್ಡನ್‌ನಲ್ಲಿ ಇಂದು ಭಾರತ-ವೆಸ್ಟ್ ಇಂಡೀಸ್ ನಡುವಿನ ಟಿ-20 ವಿಶ್ವಕಪ್‌ನ ಸೂಪರ್ 8 ಪಂದ್ಯ ನಡೆಯಲಿದೆ.

01 ಮಾರ್ಚ್ 2026 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 345 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಸಮಸ್ಯೆಗಳ ಸೂತ್ರಧಾರ ನೆಹರು » 2


ಕತ್ತಲೆಯಿಂದ ಬೆಳಕಿನೆಡೆಗೆ ಕರದೊಯ್ಯುವ ಸೂರ್ಯ ನಮಸ್ಕಾರ » 3


ಭ್ರಷ್ಟಾಚಾರ ವಿರೋಧಿಸುವ ಮನಸ್ಥಿತಿ ಬೆಳೆಸಿಕೊಳ್ಳಿ » 4

# ಇರಾನ್ ಮೇಲೆ ಇಸ್ರೇಲ್-ಅಮೇರಿಕಾ ದಾಳಿ

## ಮಧ್ಯಪ್ರಾಚ್ಯದಲ್ಲಿ ಯುದ್ಧ ಕಾರ್ಮೋಡ | ಇರಾನ್‌ನಿಂದಲೂ ಪ್ರತಿದಾಳಿ

• ಪ್ರಜೋದಯ ವರದಿ

**ನವದೆಹಲಿ:** ಪರಮಾಣು ಒಪ್ಪಂದದ ಮಾತುಕತೆಗೆ ಸ್ಪಂದಿಸದ ಇರಾನ್ ಮೇಲೆ ಅಮೇರಿಕಾ ಮತ್ತು ಇಸ್ರೇಲ್ ಜಂಟಿಯಾಗಿ ದಾಳಿ ನಡೆಸಿವೆ. ಇಸ್ರೇಲ್ ರಾಜಧಾನಿ ಟೆಲ್ ಅವೀವ್ ಮತ್ತು ಮಧ್ಯಪ್ರಾಚ್ಯದಲ್ಲಿರುವ ಅಮೇರಿಕಾದ ವಾಯನೆಲೆಗಳನ್ನು ಗುರಿಯಾಗಿಸಿಕೊಂಡು ಇರಾನ್ ಪ್ರತಿದಾಳಿ ನಡೆಸಿದೆ.

ಇರಾನ್‌ನ 30ಕ್ಕೂ ಹೆಚ್ಚು ನಗರಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ವರದಿಯಾಗಿದೆ. ರಾಜಧಾನಿ ಟೆಹರಾನ್‌ನ ಜಮ್ಹೂರಿ, ಯೂನಿವರ್ಸಿಟಿ ಸ್ಟ್ರೀಟ್ ಮತ್ತು ಉತ್ತರ ಭಾಗದ ಸೈಯದ್ ಖಂದಾನ್ ಪ್ರದೇಶ, ಅಣುಶಕ್ತಿ ಸಂಶೋಧನಾ ಕೇಂದ್ರವಿರುವ ಇಸ್ಫಹಾನ್ ಮತ್ತು ನಟಾಂಜ್, ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್(ಐಆರ್‌ಜಿಸಿ) ಪ್ರಮುಖ ನೆಲೆಗಳು, ಬಂದರು ನಗರಿ ಬುಶೆಹರ್ ಸೇರಿ ಪ್ರಮುಖ ನಗರ ಮೇಲೆ ವೈಮಾನಿಕ ದಾಳಿ ನಡೆದಿದೆ.

ಇಸ್ರೇಲ್ ರಾಜಧಾನಿ ಟೆಲ್ ಅವೀವ್ ಅನ್ನು ಗುರಿಯಾಗಿಸಿಕೊಂಡು ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ಆಪರೇಷನ್ ಟ್ರೂ ಪ್ರಾಮಿಸ್ 4 ಹೆಸರಿನಲ್ಲಿ ಅಮೇರಿಕಾ ಮತ್ತು ಅದರ ಮಿತ್ರರಾಷ್ಟ್ರಗಳ ಮೂಲಸೌಕರ್ಯ ನೆಲೆಗಳನ್ನು



ಗುರಿಯಾಗಿಸಿಕೊಂಡು ಇರಾನ್ ಪ್ರತೀಕಾರದ ದಾಳಿ ನಡೆಸಿದೆ. ಬಹ್ರೇನ್‌ನ ಮನಾಮಾದಲ್ಲಿರುವ ಅಮೇರಿಕಾ ನೌಕಾಪಡೆಯ 5ನೇ ಫ್ಲೀಟ್ ಪ್ರಧಾನ ಕಚೇರಿ, ಯುನೈಟೆಡ್ ಅರಬ್ ಎಮಿರೇಟ್ಸ್‌ನ ಅಬುಧಾಬಿಯಲ್ಲಿರುವ ಅಲ್ ದಫ್ರಾ ವಾಯುನೆಲೆ, ಕತಾರ್‌ನಲ್ಲಿರುವ ಅಮೇರಿಕಾದ ಅತಿದೊಡ್ಡ ವಾಯುನೆಲೆ ಅಲ್ ಉದೈದ್ ಮತ್ತು ಕುವೈತ್‌ನಲ್ಲಿರುವ ಅಲ್ ಸಾಲೆಮ್ ವಾಯುನೆಲೆಯನ್ನು ಗುರಿಯಾಗಿಸಿಕೊಂಡ ಇರಾನ್ ದಾಳಿ ನಡೆಸಿದೆ.

**ಇರಾನ್ ಸರ್ವೋಚ್ಚ ನಾಯಕನೇ ಗುರಿ**

ಇರಾನಿನ ಸರ್ವೋಚ್ಚ ನಾಯಕ ಖಮೇನಿ ಮತ್ತು ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಅವರನ್ನು ಗುರಿಯಾಗಿಸಿ ದಾಳಿ ನಡೆಸಲಾಗಿತ್ತು ಎಂದು ಇಸ್ರೇಲ್ ಹೇಳಿದೆ. ಇರಾನ್ ಸುಪ್ರೀಂ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಕಚೇರಿಗಳ ಬಳಿ ಆರಂಭಿಕ ದಾಳಿಗಳು ನಡೆದಿತ್ತು. ಆಗ 86 ವರ್ಷದ ಖಮೇನಿ ಟೆಹ್ರಾನ್‌ನಲ್ಲಿ ಇರಲಿಲ್ಲ. ಆ ಸಮಯದಲ್ಲಿ ಅವರನ್ನು ಸುರಕ್ಷಿತ ಸ್ಥಳಕ್ಕೆ ವರ್ಗಾಯಿಸಲಾಗಿತ್ತು.

**ವಿಮಾನಯಾನ ಸ್ಥಗಿತ**

ಇರಾನ್ ಮತ್ತು ಇಸ್ರೇಲ್ ಯುದ್ಧದಿಂದ ಮಧ್ಯಪ್ರಾಚ್ಯ ದೇಶಗಳು ಸೇರಿ ಜಗತ್ತಿನ ವಿವಿಧ ಕಡೆಗಳಲ್ಲಿ ವಿಮಾನಯಾನದಲ್ಲಿ ವ್ಯತ್ಯಯ ಉಂಟಾಗಿದೆ. ಇಸ್ರೇಲ್, ಇರಾನ್, ಇರಾಕ್, ಜೋರ್ಡಾನ್, ಯುಎಇ ಮತ್ತು ಸಿರಿಯಾ ಸೇರಿ ಹಲವು ದೇಶಗಳು ತಮ್ಮ ವಾಯು ಪ್ರದೇಶವನ್ನು ಸಂಪೂರ್ಣವಾಗಿ ಮುಚ್ಚಿವೆ. ಏರ್ ಇಂಡಿಯಾ, ಇಂಡಿಗೋ, ಎಮಿರೇಟ್ಸ್ ಮತ್ತು ಕತಾರ್ ಏರ್‌ವೇಸ್‌ನಂತಹ ಪ್ರಮುಖ ವಿಮಾನಯಾನ ಸಂಸ್ಥೆಗಳು ಮಧ್ಯಪ್ರಾಚ್ಯಕ್ಕೆ ವಿಮಾನಯಾನವನ್ನು ಸ್ಥಗಿತಗೊಳಿಸಿವೆ. ಜಗತ್ತಿನಾದ್ಯಂತ ಸಾವಿರಾರು ಪ್ರಯಾಣಿಕರು ತೊಂದರೆ ಅನುಭವಿಸುತ್ತಿದ್ದಾರೆ.

### ಎಚ್ಚರ ವಹಿಸಲು ಭಾರತೀಯರಿಗೆ ಸಲಹೆ

ಇಸ್ರೇಲ್ ಮತ್ತು ಅಮೇರಿಕ ಇರಾನ್ ವಿರುದ್ಧ ಜಂಟಿ ದಾಳಿ ನಡೆಸಿದ ಕೆಲವೇ ಗಂಟೆಗಳ ನಂತರ, ಟೆಲ್ ಅವೀವ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಶನಿವಾರ ಇಸ್ರೇಲ್‌ನಲ್ಲಿ ರುವ ಭಾರತೀಯರು ಹೆಚ್ಚುತ್ತಿರುವ ಉದ್ವಿಗ್ನತೆಯ ನಡುವೆ ಎಚ್ಚರಿಕೆಯಿಂದ ವರ್ತಿಸುವಂತೆ ಭಾರತ ತುರ್ತು ಸಲಹೆ ಬಿಡುಗಡೆ ಮಾಡಿದೆ. ಭಾರತೀಯರು ಅಧಿಕೃತ ಹೋಮ್ ಫ್ರಂಟ್ ಕಮಾಂಡ್ ವೆಬ್‌ಸೈಟ್‌ನಲ್ಲಿ ನವೀಕರಿಸಿದ ಸೂಚನೆಗಳನ್ನು ನಿಯಮಿತವಾಗಿ ಪರಿಶೀಲಿಸಲು, ಗೊತ್ತುಪಡಿಸಿದ ಆಶ್ರಯ ತಾಣಗಳ ಬಳಿಯೇ ಇರಲು, ಅವರ ನಿವಾಸ ಅಥವಾ ಕೆಲಸದ ಸ್ಥಳದ ಬಳಿ ಇರುವ ಸುರಕ್ಷಿತ ಸ್ಥಳಗಳನ್ನು ಸೇರಿಕೊಳ್ಳಲು ಸೂಚಿಸಲಾಗಿದೆ. ಇರಾನ್, ಕತಾರ್‌ನಲ್ಲಿರುವ ಭಾರತೀಯ ಪ್ರಜೆಗಳಿಗೆ ಕೂಡ ಸಲಹೆ ನೀಡಲಾಗಿದೆ.

## ಕಾರು ಅಪಘಾತ: ಒಬ್ಬ ಸಾವು, ಮೂವರಿಗೆ ಗಾಯ

• ಪ್ರಜೋದಯ ವರದಿ

**ಸಕಲೇಶಪುರ:** ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸಿದ ಭೀಕರ ಕಾರು ಅಪಘಾತದಲ್ಲಿ ಯುವಕನೊಬ್ಬ ಮೃತಪಟ್ಟು, ಮೂವರು ಗಂಭೀರವಾಗಿ ಗಾಯಗೊಂಡ ಘಟನೆ ತಾಲ್ಲೂಕಿನ ಗುಳಗಳಲೆ ಸಮೀಪ ಶನಿವಾರ ನಡೆದಿದೆ. ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಬರಗೂರು ಗ್ರಾಮದ ಧನುಷ್ (24) ಮೃತ ದುರ್ದೈವಿ.

ಬೆಂಗಳೂರು ನಗರದ ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಧನುಷ್ ಸೇರಿ 10 ಮಂದಿ ಸ್ನೇಹಿತರು 2 ಕಾರಿನಲ್ಲಿ ಧರ್ಮಸ್ಥಳ ಹಾಗು ಮಂಗಳೂರು ಪ್ರವಾಸಕ್ಕೆ ತೆರಳುತ್ತಿದ್ದರು. ಈ ವೇಳೆ ಗುಳಗಳಲೆ ಸಮೀಪ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಅಪ್ಪಳಿಸಿದ ಪರಿಣಾಮ ಕಾರು ಸಂಪೂರ್ಣ ಜಖಂಗೊಂಡಿದೆ. ಅಪಘಾತದ ತೀವ್ರತೆಗೆ ಧನುಷ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಾಯಗೊಂಡವರನ್ನು ತಕ್ಷಣ ತಾಲ್ಲೂಕು ಸರ್ಕಾರಿ ಕ್ರಾಫರ್ಡ್ ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ನೀಡಲಾಯಿತು. ಬಳಿಕ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ



ಚಿಕಿತ್ಸೆಗಾಗಿ ಹಾಸನ ಹಾಗು ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಪಘಾತದ ಪರಿಣಾಮ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಮಾರು 2 ಗಂಟೆಗಳ ಕಾಲ ವಾಹನ ಸಂಚಾರ ವ್ಯತ್ಯಯ ಉಂಟಾಯಿತು. ಈ ಸಂಬಂಧ ಸ್ಥಳಕ್ಕೆ ನಗರ ಪೊಲೀಸ್ ಠಾಣೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು.

ಇದೇ ಪ್ರದೇಶದಲ್ಲಿ ಕಳೆದ 2 ವರ್ಷಗಳಲ್ಲಿ ಹಲವು ಅಪಘಾತಗಳು ಸಂಭವಿಸಿ ಒಟ್ಟು 9 ಮಂದಿ ಜೀವ ಕಳೆದುಕೊಂಡಿದ್ದಾರೆ. ರಸ್ತೆ ಕಾಮಗಾರಿಯ ಅವೈಜ್ಞಾನಿಕ ನಿರ್ಮಾಣವೇ ಅಪಘಾತಗಳಿಗೆ ಕಾರಣ ಎಂದು ಸ್ಥಳೀಯರು ಆರೋಪಿಸಿದ್ದಾರೆ.

# ಅರಣ್ಯ ಸಚಿವರೊಂದಿಗೆ ಕಾಡಾನೆ ಸಮಸ್ಯೆ ಚರ್ಚೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಕಾಡಾನೆ ಮತ್ತು ಮಾನವನ ಸಂಘರ್ಷವನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳು ಹಾಗು ಮುಂಜಾಗ್ರತಾ ವ್ಯವಸ್ಥೆ ಬಗ್ಗೆ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಶನಿವಾರ ಅಧಿಕಾರಿಗಳೊಂದಿಗೆ ಮಾಹಿತಿ ಪಡೆದುಕೊಂಡರು.

ಬೆಂಗಳೂರಿನಿಂದ ಚಿಕ್ಕಮಗಳೂರಿಗೆ ತೆರಳುವ ಮಾರ್ಗ ಮಧ್ಯೆ ನಗರದ ಹೊರವಲಯದ ಗೆಂಡೆಕಟ್ಟೆ ಅರಣ್ಯ ಪ್ರದೇಶಕ್ಕೆ ಭೇಟಿ ನೀಡಿದ ಸಚಿವರು, ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಜಿಲ್ಲೆಯಲ್ಲಿ ಕಾಡಾನೆಗಳಿಂದ ಸಂಭವಿಸಿರುವ ಅನಾಹುತಗಳು, ಬೆಳೆ ಹಾನಿ, ಮಾನವ ಹಾನಿ ಹಾಗು ಪರಿಹಾರ ನೀಡಿರುವ ಅಂಕಿ-ಅಂಶಗಳ ಕುರಿತು ಮಾಹಿತಿ ಪಡೆದುಕೊಂಡರು.

ಜಿಲ್ಲೆಯಲ್ಲಿ ಕಾಡಾನೆಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಿನ್ನಲೆ ಅವುಗಳ ನಿಯಂತ್ರಣಕ್ಕೆ ಕೈಗೊಳ್ಳಬಹುದಾದ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿ



ದರು. ಕಾಡಾನೆಗಳ ಚಲನ-ವಲನಗಳನ್ನು ಗಮನದಲ್ಲಿಡಲು ರೇಡಿಯೋ ಕಾಲರ್ ಅಳವಡಿಕೆ, ಡ್ರೋನ್ ಕ್ಯಾಮರಾ ಬಳಕೆ ಹಾಗು ಎಐ ತಂತ್ರಜ್ಞಾನವನ್ನು ಬಳಸಿ ನಿಗಾ ವಹಿಸುವ ಬಗ್ಗೆ ಮಾಹಿತಿ ಪಡೆದುಕೊಂಡರು.

ಕಾಡಾನೆಗಳು ಗ್ರಾಮಗಳತ್ತಾ ನುಗ್ಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಬಲಪಡಿಸುವುದು, ಸ್ಥಳೀಯರಿಗೆ ಮುಂಜಾಗ್ರತಾ ಸೂಚನೆ ನೀಡುವ ವ್ಯವಸ್ಥೆ ಮತ್ತು ಮಾನವ-ಕಾಡಾನೆ ಸಂಘರ್ಷ ವನ್ನು ಕಡಿಮೆ ಮಾಡುವ ದಿಕ್ಕಿನಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಂತೆ ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

ಅರಣ್ಯ ಇಲಾಖೆ ಅಧಿಕಾರಿಗಳು ಇಟಿಎಫ್‌ಮತ್ತುಆರ್‌ಆರ್‌ಟಿ ಸಿಬ್ಬಂದಿ ನೆರವಿನೊಂದಿಗೆ ಡ್ರೋನ್ ಮತ್ತು ಥರ್ಮಲ್ ಕ್ಯಾಮರಾಗಳ ಮೂಲಕ ಕಾಡಾನೆಗಳ ಚಲನ- ವಲನದ ಬಗ್ಗೆ ನಿಗಾ ವಹಿಸಿ ತೆಗೆದಿರುವ ಫೋಟೋಗಳನ್ನು ವೀಕ್ಷಣೆ ಮಾಡಿದರು. ಈ ಸಂದರ್ಭದಲ್ಲಿ ಸಂಸದ ಶ್ರೇಯಸ್ ಪಟೇಲ್, ಸಿಸಿಎಫ್ ಏಡುಕೊಂಡಲು ಸೇರಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.


## ಸುಲಭದ ಲೋನ್‌ಗಾಗಿ ಮೋಸ ಹೋದ ಜನರು | ಸಂಪರ್ಕಕ್ಕೆ ಸಿಗದ ವ್ಯವಸ್ಥಾಪಕಿ ಪೂಜಾ

# ಸಾಲ ಕೊಡುವ ನೆಪದಲ್ಲಿ ಕೋಟ್ಯಾಂತರ ರೂ. ಪಂಗನಾಮ

• ಪ್ರಜೋದಯ ವರದಿ

**ಹಾಸನ:** ಕೇಂದ್ರ ಸರ್ಕಾರದ ವಿವಿಧ ಯೋಜನೆಯಡಿ ಲೋನ್ ಮಾಡಿಸಿ ಕೊಡುತ್ತೇನೆಂದು ಬ್ಯಾಂಕ್ ವ್ಯವಸ್ಥಾಪಕಿಯೊಬ್ಬರು ನೂರಕ್ಕೂ ಅಧಿಕ ಜನರಿಗೆ ಸುಮಾರು 5 ಕೋಟಿ ರೂ. ವರೆಗೆ ಪಂಗನಾಮ ಹಾಕಿರುವ ಪ್ರಕರಣ ಬೆಳಕಿಗೆ ಬಂದಿದೆ.

ನಗರದ ತಣ್ಣೀರುಹಳ್ಳದಲ್ಲಿರುವ ಸುರ್ಯೋದಯ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ವ್ಯವಸ್ಥಾಪಕಿ ಹೆಚ್.ಎಸ್. ಪೂಜಾ ಎಂಬುವವರ ವಿರುದ್ಧ ಗಂಭೀರ ಆರೋಪ ಕೇಳಿಬಂದಿದೆ. ನಿಗದಿತ ಠೇವಣಿ ಇಟ್ಟರೆ 25 ರಿಂದ 50 ಲಕ್ಷ ರೂ. ವರೆಗೆ ಲೋನ್ ಕೊಡಿಸುತ್ತೇನೆ. ಅದಕ್ಕೆ 10 ಲಕ್ಷ ರೂ. ವರೆಗೆ ಸಹಾಯಧನ ದೊರೆಯುತ್ತದೆಂದು ಪೂಜಾ ನಂಬಿಸಿದ್ದರು. ಅವರ ಮಾತಿಗೆ ಮರುಳಾಗಿ ಸಾಲ ಸೋಲ ಮಾಡಿ ಠೇವಣಿ ಕಟ್ಟಿದ್ದೇವೆ. ನಮಗೆ ನ್ಯಾಯ ದೊರಕಿಸಿಕೊಡಬೇಕೆಂದು 40ಕ್ಕೂ ಹೆಚ್ಚು ಜನರು ಶುಕ್ರವಾರ ರಾತ್ರಿ




ಪೆನ್ಷನ್ ಮೊಹಲ್ಲಾ ಠಾಣೆ ಎದುರು ಜಮಾಯಿಸಿದ್ದರು.

**ಎಫ್‌ಡಿ ಹಣಕ್ಕೆ ದಾಖಲೆಯೂ ಇಲ್ಲ**

ಬ್ಯಾಂಕ್‌ನಲ್ಲಿ ಎಫ್‌ಡಿ ಇಟ್ಟರೆ 25 ರಿಂದ 50 ಲಕ್ಷ ರೂ. ವರೆಗೆ ಸಾಲ ಕೊಡಿಸುವ ಆಮಿಷವನ್ನು ಪೂಜಾ ನೀಡಿದ್ದರು. ಸುಲಭದ ಸಾಲಕ್ಕೆ ಮಾರು ಹೋದ ಜನರು ಎಫ್‌ಡಿ ಮಾಡಿದ್ದರು. ವಿಪರ್ಯಾಸ ಎಂದರೆ ಎಫ್‌ಡಿ ಮಾಡಿ ರುವ ಹಣಕ್ಕೆ ಯಾವ ದಾಖಲೆಯನ್ನು ವ್ಯವಸ್ಥಾಪಕಿ ನೀಡಿರಲಿಲ್ಲ. ಗ್ರಾಹಕರೂ ಕೇಳಿರಲಿಲ್ಲ ಎನ್ನಲಾಗಿದೆ. ಇತ್ತೀಚೆಗೆ ಗ್ರಾಹಕರು ಹಣ ವಾಪಸ್ ಕೇಳಲು ಆರಂಭಿಸಿದಾಗ ಕೆಲವರಿಗೆ ಚೆಕ್ ನೀಡಿದ್ದ ಪೂಜಾ ಎಸ್ಕೇಪ್ ಆಗಿದ್ದಾರೆ ಎನ್ನಲಾಗಿದೆ.

ಸುಲಭದ ಲೋನ್‌ಗಾಗಿ ಕೆಲವರು ಫೋನ್ ಪೇ, ಗೂಗಲ್ ಪೇ ಮೂಲಕ ಹಣ ನೀಡಿದ್ದರೆ ಇನ್ನು ಕೆಲವರು ಕೈಗೆ ಹಣ ತಲುಪಿಸಿದ್ದಾರೆ. ಹೀಗಾಗಿ ಹಣ ಮರಳಿ ಬರುವುದೇ ಎಂಬ ಚಿಂತೆ ಎಲ್ಲರನ್ನೂ ಕಾಡುತ್ತಿದೆ.

**ಫೋನ್ ಸ್ವಿಚ್ಡ್ ಆಫ್, ವಿದೇಶಕ್ಕೆ ಪರಾರಿ ಅನುಮಾನ**

ಚನ್ನಪಟ್ಟಣ ಬಡಾವಣೆಯ ಅಶೋಕ್ ಎಂಬುವವರಿಗೆ ಫೆ.6ರಂದು ಚೆಕ್ ನೀಡಿದ್ದ ಪೂಜಾ ಆ ಬಳಿಕ ಸಿಕ್ಕಿಲ್ಲ. ಬ್ಯಾಂಕ್‌ಗೆ ಬಂದು ವಿಚಾರಿಸಿದಾಗ ವೈದ್ಯಕೀಯ ಕಾರಣಗಳಿಂದ ರಜೆಯಲ್ಲಿದ್ದಾರೆಂಬ ಉತ್ತರ ಬಂದಿದೆ. ಅದರಿಂದ ಅನುಮಾನಗೊಂಡ ಅವರು ಮೊಬೈಲ್ ನಂಬರ್‌ಗೆ ಕರೆ ಮಾಡಿದಾಗ ಸ್ವಿಚ್ಡ್ ಆಫ್ ಆಗಿದೆ. ಕೋಟ್ಯಾಂತರ ರೂಪಾಯಿ ವಂಚಿಸಿರುವ ಪೂಜಾ ವಿದೇಶಕ್ಕೆ ಪರಾರಿಯಾಗಿರುವ ಅನುಮಾನವೂ ವ್ಯಕ್ತವಾಗಿದೆ.

ಅವರು ವಿಮಾನ ನಿಲ್ದಾಣದಲ್ಲಿ ಓಡಾಡುತ್ತಿರುವ ಮಾಹಿತಿ ಇದ್ದು, ಪರಾರಿಯಾಗಲು ಯಾವ ಕಾರಣಕ್ಕೂ ಬಿಡಬಾರದು. ಪಾಸ್‌ಪೋರ್ಟ್ ರದ್ದು ಮಾಡಿ ವಿದೇಶ ಪ್ರಯಾಣವನ್ನು ತಡೆಯಬೇಕು. ಸಾಲ ಕೊಡಿಸುವ ಆಮಿಷವೊಡ್ಡಿ ಗ್ರಾಹಕರನ್ನು ವಂಚಿಸಿರುವ ಆಕೆಯನ್ನು ಬಂಧಿಸಿ, ತಮಗೆ ನ್ಯಾಯ ಕೊಡಿಸಬೇಕೆಂದು ಗ್ರಾಹಕರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ ಅವರಿಗೂ ದೂರು ನೀಡಿದ್ದಾರೆ.

### ಸಾರ್ವಜನಿಕರು ದಾಖಲೆ ಒದಗಿಸಿಲ್ಲ

ಸೂರ್ಯೋದಯ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನಿಂದ ತಮಗೆ ಮೋಸ ಆಗಿದೆ ಎಂದು 40ಕ್ಕೂ ಹೆಚ್ಚು ಜನರು ಠಾಣೆ ಬಳಿ ಬಂದಿದ್ದರು. ಎಫ್‌ಡಿ ಕಟ್ಟಿರುವುದಕ್ಕೆ ದಾಖಲೆ ತಂದುಕೊಡುವಂತೆ ಸೂಚಿಸಲಾಗಿತ್ತು. ಇಲ್ಲಿವರೆಗೆ ಯಾರೂ ದಾಖಲೆಗಳನ್ನು ನೀಡಿಲ್ಲ. ಬ್ಯಾಂಕ್ ವ್ಯವಸ್ಥಾಪಕಿ ಪೂಜಾ ಎಲ್ಲಿಯವರು ಎಂಬ ಮಾಹಿತಿ ಇಲ್ಲ. ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಪೆನ್ಷನ್ ಮೊಹಲ್ಲಾ ಠಾಣೆ ಪೊಲೀಸರು ತಿಳಿಸಿದ್ದಾರೆ.

## 7 ಲಕ್ಷ ರೂ. ಬೆಲೆಯ ಚಿನ್ನಾಭರಣ ಕಳವು

**ಹಾಸನ:** ಹಾಡ ಹಗಲೇ ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 7 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಕಂಚಮಾರನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಕೆ.ಆರ್.ಭಾರತಿ ಎಂಬುವವರ ಮನೆಯಲ್ಲಿ ಕಳ್ಳತನ ನಡೆದಿದೆ. ಶುಕ್ರವಾರ ಬೆಳಿಗ್ಗೆ 10.30ಕ್ಕೆ ಬೀಗ ಹಾಕಿ ಅಂಗನವಾಡಿ ಕೆಲಸಕ್ಕೆಂದು ಹೋಗಿದ್ದ ಅವರು ಸಂಜೆ 4 ಗಂಟೆಗೆ ವಾಪಾಸ್ ಬಂದಾಗ ಕಳ್ಳತನವಾಗಿರುವುದು ತಿಳಿದಿದೆ. ಬೀಗ ಮುರಿದು ಒಳ ಪ್ರವೇಶಿಸಿರುವ ಕಳ್ಳರು ಬೀರುವಿನ ಬೀಗ ಮುರಿದಿದ್ದಾರೆ. ಮನೆ ಹಾಗು ಜಮೀನು ಕಾಗದ ಪತ್ರಗಳು, 45 ಗ್ರಾಂ ತೂಕದ ಚಿನ್ನದ ತುಳಸಿ ಹಾರ ಮತ್ತು 10 ಸಾವಿರ ರೂ. ಕದ್ದಿದ್ದಾರೆ.

# ರಾಗಿ ಖರೀದಿ: ತೂಕದಲ್ಲಿ ಮುಂದುವರಿದ ಮೋಸದಾಟ

## ಶಾಸಕ, ತಹಶೀಲ್ದಾರ್ ಎಚ್ಚರಿಕೆಗೆ ಬಗ್ಗದ ಅಧಿಕಾರಿಗಳು | ರೈತ ಸಂಘದಿಂದ ಪ್ರತಿಭಟನೆ ಎಚ್ಚರಿಕೆ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ಎಪಿಎಂಸಿ ಮತು ರಾಮನಾಥಪುರದ ರಾಗಿ ಖರೀದಿ ಕೇಂದ್ರ ಗಳಲ್ಲಿ ರಾಗಿ ಕಳ್ಳತನ ಮೋಸದಾಟ ಮುಂದುವರಿದಿದ್ದು, ಎಚ್ಚರಿಕೆಗೂ ಬಗ್ಗದ ಆಹಾರ ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳ ವಿರುದ್ಧ ರೈತ ಸಂಘಟನೆ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಾಲ್ಕನೇ ಶನಿವಾರ ಸರ್ಕಾರಿ ರಜೆ ದಿನವನ್ನು ಲಾಭ ಮಾಡಿಕೊಳ್ಳುವ ಸಲುವಾಗಿ ರಾಗಿ ಖರೀದಿ ಕೇಂದ್ರಗಳ ಅಧಿಕಾರಿ, ಮಧ್ಯವರ್ತಿಗಳು, ವರ್ತಕರು ಅನಧಿಕೃತವಾಗಿ ರಾಗಿಯನ್ನು ತಂದು ನಕಲಿ ರೈತರ ಹೆಸರಿನಲ್ಲಿ ಬಿಡಲು ಸಿದ್ಧತೆ ನಡೆಸಿದ್ದರು. ಅದನ್ನು



ಕಂಡು ಪಟ್ಟಣದ ರಾಗಿ ಖರೀದಿ ಕೇಂದ್ರಕ್ಕೆ ಆಗಮಿಸಿದ ರೈತ ಸಂಘಟನೆಗಳ ಮುಖಂಡರು ಯಾವುದೇ ಎಫ್‌ಐಡಿ ಇಲ್ಲದೆ 55 ಚೀಲ ರಾಗಿಯನ್ನು ಲಾರಿಗೆ ತುಂಬಿರುವುದನ್ನು ಪತ್ತೆಹಚ್ಚಿ ಪ್ರತಿಭಟಿಸಿದರು.

ರಾಗಿ ಖರೀದಿ ಅಧಿಕಾರಿಗಳ ಬೆಂಬಲಿಗರು, ರೈತರ ಹೆಸರಿನಲ್ಲಿ ಬಂದಿದ್ದ ದಲ್ಲಾಳಿಗಳು ಹಾಗು ಚೀಲ ತುಂಬುವ ಹಮಾಲಿಗಳ ನಡುವೆ ಮಾತಿನ ಚಕಮಕಿ ನಡೆದುದಲ್ಲದೇ ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿತು.

ವಿಷಯ ತಿಳಿದು ರಜೆಯಲ್ಲಿದ್ದ ತಹಶೀಲ್ದಾರ್ ಕೆ.ಸಿ.ಸೌಮ್ಯ ಅವರು ತನ್ನ ಹಸೂಗೂಸಿನೊಂದಿಗೆ ಆಗಮಿಸಿ ರೈತರ ಆರೋಪವನ್ನು ಆಲಿಸಿದರು. ಈ ಸಂದರ್ಭದಲ್ಲಿಯೂ ಕೂಡ ರೈತ ಸಂಘಟನೆ ಸದಸ್ಯರ ಮೇಲೆ ಬಾಡಿಗೆ ದಲ್ಲಾಳಿಗಳು ಏಕವಚನದಿಂದ ನಿಂದಿಸಲು ಆರಂಭಿಸಿದರು. ಇವರೆಲ್ಲರೂ ರಾಗಿ ಬಿಡಲು ಬಂದ ರೈತರಾಗಿರಲಿಲ್ಲ. ಬದಲಾಗಿ ಖರೀದಿ ಅಧಿಕಾರಿಗಳ ಬೆಂಬಲಿಗರು ಎಂಬುದು ಕಂಡು ಬಂದಿತು. ನೋಡ್ರಿ, ಇಂದು ರಾಗಿ ಖರೀದಿ ಕೇಂದ್ರದ ಅಧಿಕಾರಿ ಇಲ್ಲ. ಬೇರೆಯವರನ್ನು ಬಿಟ್ಟು ಹೋಗಿದ್ದಾರೆ. ಅಲ್ಲದೆ ಇಂದು ರಜೆ ದಿನವಾಗಿರುವ ಹಿನ್ನಲೆ ಸಂಬಂಧಪಟ್ಟ

» ನಾಲ್ಕನೇ ಪುಟದಲ್ಲಿ

# ನಗರದಲ್ಲಿ ಶನಿವಾರ ಟ್ರಾಫಿಕ್ ಕಿರಿ ಕಿರಿ ವಿಪರೀತ

• ಪ್ರಜೋದಯ ವರದಿ

**ಹಾಸನ:** ನಗರದ ಬಿಎಂ ರಸ್ತೆ, ಸಹ್ಯಾದ್ರಿ ವೃತ್ತ, ಹೇಮಾವತಿ ಪ್ರತಿಮೆ ಬಳಿ ಶನಿವಾರ ವಿಪರೀತ ಟ್ರಾಫಿಕ್ ಜಾಮ್‌ನಿಂದ ಪ್ರಯಾಣಿಕರು ಪ್ರಯಾಸ ಪಡಬೇಕಾಯಿತು.

ವಾರಾಂತ್ಯ, ದ್ವಿತೀಯ ಪಿಯುಸಿ ಪರೀಕ್ಷೆ ಹಿನ್ನಲೆಯಲ್ಲಿ ನಗರದಲ್ಲಿ ಜನ ಸಂಚಾರ ಹೆಚ್ಚಾಗಿತ್ತು. ಮಧ್ಯಾಹ್ನ 1 ರಿಂದ 2ರ ವರೆಗೆ ಮುಖ್ಯ ರಸ್ತೆಗಳೆಲ್ಲಾ ವಾಹನಗಳಿಂದ ತುಂಬಿ ತುಳುಕುತ್ತಿದ್ದವು. ಪರೀಕ್ಷೆ ಮುಗಿಸಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಹೊರ ಬಂದಿದ್ದರಿಂದ ರಸ್ತೆಯ ತುಂಬೆಲ್ಲಾ ಅವರೇ ಕಾಣಿಸುತ್ತಿದ್ದರು. ಇನ್ನು ಶಂಕರಮಠ ರಸ್ತೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಅದೇ ಸಮಯಕ್ಕೆ ವಿದ್ಯಾರ್ಥಿಗಳನ್ನು ಬಿಟ್ಟಿದ್ದರಿಂದ ವಾಹನಗಳು ಓಡಾಡಲು ಅವಕಾಶವೇ ಆಗಲಿಲ್ಲ. ಬಿ.ಎಂ.ರಸ್ತೆಯ ತಿರುವಿನಲ್ಲಿ ವಾಹನಗಳು ಜಾಂ ಆಗಿದ್ದರಿಂದ ಅಂದಾಜು 1 ಕಿ.ಮೀ. ದೂರ ನಿಂತಲ್ಲೇ ನಿಲ್ಲಬೇಕಾ ಯಿತು. ಮುಖ್ಯ ರಸ್ತೆಯಲ್ಲಿ ಲಾರಿಗಳ ಸಂಚಾರವೂ ಹೆಚ್ಚಿದ್ದರಿಂದ ಸಮಸ್ಯೆ ಬಿಗಡಾಯಿಸಿತು. ಹೀಗಾಗಿ ದ್ವಿಚಕ್ರ ವಾಹನ ಸವಾರರು ಏಕಮುಖ ರಸ್ತೆ ಯಲ್ಲಿ ಸಂಚರಿಸಿದರು.



**ಕಾಣಿಸಿಕೊಳ್ಳದ ಟ್ರಾಫಿಕ್ ಪೊಲೀಸರು**

ನಗರದ ಹೃದಯ ಭಾಗದಲ್ಲಿ ಟ್ರಾಫಿಕ್ ಸಮಸ್ಯೆಯಾದರೂ ಪೊಲೀಸರು ಮಾತ್ರ ಸುಗಮ ಸಂಚಾರ ವ್ಯವಸ್ಥೆಗಾಗಿ ಬರಲಿಲ್ಲ. ಅದೇ ಸಮಯದಲ್ಲಿ ಎಂ.ಜಿ. ರಸ್ತೆಯಲ್ಲಿ ಬೈಕ್ ತಪಾಸಣೆ ಕಾರ್ಯದಲ್ಲಿ ಏಳೆಂಟು ಟ್ರಾಫಿಕ್ ಪೊಲೀಸರು ನಿರತರಾಗಿದ್ದರು. ಪ್ರತಿದಿನ ಮಧ್ಯಾಹ್ನ 1 ರಿಂದ 2ರ ವರೆಗೆ ಶಂಕರ ಮಠ ರಸ್ತೆಯಲ್ಲಿ ಇದೇ ರೀತಿ ಸಮಸ್ಯೆಯಾಗುತ್ತಿದ್ದು ಸಂಚಾರ ಪೊಲೀಸರನ್ನು ನಿಯೋಜಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದರು.

# 81 ಮಂದಿಗೆ ಉಚಿತ ಮಂಡಿ ಚಿಪ್ಪು ಶಸ್ತ್ರ ಚಿಕಿತ್ಸೆ

## ಸ್ವಾಮೀಜಿ ಆಶಯದಂತೆ ಆದಿಚುಂಚನಗಿರಿ ಆಸ್ಪತ್ರೆಯಿಂದ ಸೇವೆ: ಡಾ|| ರವಿ

• ಪ್ರಜೋದಯ ವರದಿ

**ಹಾಸನ:** ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರ 81ನೇ ವರ್ಧಂತೋತ್ಸವ ಹಾಗು ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ 13ನೇ ವರ್ಷದ ಪಟ್ಟಾಭಿಷೇಕ ಮಹೋತ್ಸವ ಅಂಗವಾಗಿ ಬೆಳ್ಳೂರು ಕ್ರಾಸ್‌ನಲ್ಲಿರುವ ಆದಿ ಚುಂಚನಗಿರಿ ಆಸ್ಪತ್ರೆಯಲ್ಲಿ 81 ಮಂದಿಗೆ ಉಚಿತವಾಗಿ ಮಂಡಿ ಚಿಪ್ಪು ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ ಎಂದು ಬಿಜಿಎಸ್ ಮಹಾವಿದ್ಯಾಲಯದ ಉಪ ಪ್ರಾಂಶುಪಾಲ ಡಾ||ರವಿ ಅವರು ತಿಳಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾಮೀಜಿ ಅವರ ಆಶಯದಂತೆ ಬಡವರು, ರೈತರು ಹಾಗು ಗ್ರಾಮೀಣ ಭಾಗದ ಜನರಿಗೆ ಉಚಿತವಾಗಿ ಆರೋಗ್ಯ ಸೌಲಭ್ಯ ಒದಗಿಸುವ ಕೆಲಸ ಮಾಡಲಾ ಗುತ್ತಿದೆ. ಅದರಂತೆ ಹಾಸನ, ಮಂಡ್ಯ, ಮೈಸೂರು, ತುಮಕೂರು ಜಿಲ್ಲೆಗಳ ಆಯ್ದ ಮಂದಿಗೆ ಜ.18 ರಿಂದ ಫೆ.20 ವರೆಗೆ ನಡೆದ ಶಿಬಿರದಲ್ಲಿ ಉಚಿತ ಶಸ್ತ್ರ ಚಿಕಿತ್ಸೆ ಮೂಲಕ ಅವರ ನೋವು ನಿವಾರಣೆ ಮಾಡಲಾಗಿದೆ. ಅದಕ್ಕೆ ಬೇರೆ ಬೇರೆ ಆಸ್ಪತ್ರೆಗಳಲ್ಲಿ 2-3 ಲಕ್ಷ ರೂ. ವೆಚ್ಚವಾಗಲಿದೆ. ನಾವು 81 ಮಂದಿಗೆ ಚಿಕಿತ್ಸೆ ಮಾಡಿದ್ದೇವೆ ಎಂದರು.




ಕ್ಯಾನ್ಸರ್ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲು 38 ಕೋಟಿ ರೂ. ವೆಚ್ಚದಲ್ಲಿ ರೇಡಿಯೋ ಥೆರಫಿ ಯಂತ್ರ ಅಳವಡಿಸಲಾಗುತ್ತಿದೆ. ಸೆಪ್ಟೆಂಬರ್ 25 ರಂದು ಲೋಕಾರ್ಪಣೆ ಮಾಡಲು ಉದ್ದೇಶಿಸಲಾಗಿದೆ. ಬಿಪಿಎಲ್ ಕಾರ್ಡ್ ಹೊಂದಿರುವ, ಎಬಿಆರ್‌ಕೆ ಹಣ ಭರಿಸಲಾಗದವರಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡಲು, ಹಳೇ ಮೈಸೂರು ಭಾಗದ ಜಿಲ್ಲೆಗಳ ಜನರಿಗೆ ಅನುಕೂಲ ಮಾಡಿಕೊಡಲು ಉದ್ದೇಶಿಸಲಾಗಿದೆ ಎಂದರು.

ಆರ್ಥೋ ವಿಭಾಗದ ಮುಖ್ಯಸ್ಥ ಡಾ||ಮಹೇಶ್ ಅವರು ಮಾತನಾಡಿ, ಮೊದಲು ಗುರುತು ಮಾಡಿ, ನಂತರ ಸ್ಕ್ರೀನಿಂಗ್ ನಡೆಸಿ ಅಬಲರಾಗಿರುವ 18 ಮಂದಿಗೆ ಕೃತಕ ಕಾಲು ಜೋಡಣೆ ಮಾಡಲಾಗಿದೆ.

ಆಸ್ಪತ್ರೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ದೇವೇಂದ್ರ ಅವರು ಮಾತನಾಡಿ, ನಮ್ಮ ಆಸ್ಪತ್ರೆಯಲ್ಲಿ ಮುಂದಿನ ಒಂದು ವರ್ಷ ಸಾಮಾನ್ಯ ಹೆರಿಗೆ ಆಗುವ ಮಹಿಳೆಯರು 5 ಸಾವಿರ ರೂ., ಶಸ್ತ್ರ ಚಿಕಿತ್ಸೆ ಅಗತ್ಯವಿರುವ ಮಹಿಳೆಯರು 10 ಸಾವಿರ ರೂ. ಪಾವತಿಸಿದರೆ ಅವರ ರಕ್ತ ಪರೀಕ್ಷೆ, ಔಷಧಿ, ಸ್ಕ್ಯಾನಿಂಗ್ ಎಲ್ಲವನ್ನೂ ಉಚಿತವಾಗಿ ಮಾಡಿ ಮನೆಗೆ ಕಳುಹಿಸಿಕೊಡಲಾಗಿದೆ. ಈಗಾಗಲೇ 6000 ಮಂದಿಗೆ ಉಚಿತ ಕಣ್ಣಿನ ತಪಾಸಣೆ ಹಾಗು ಶಸ್ತ್ರ ಚಿಕಿತ್ಸೆ ನಡೆಸಿ ಕನ್ನಡಕ ವಿತರಿಸಲಾಗಿದೆ. ಹಾಗೆಯೇ ಮೆಗಾ ಆರೋಗ್ಯ ಶಿಬಿರ ಮಾಡಲಾಗಿದೆ. 200 ಮಂದಿಗೆ ಆಂಜಿಯೋಗ್ರಾಂ ಮಾಡಲಾಗಿದೆ. 37 ಮಂದಿಗೆ ಕಿಡ್ನಿ ಕಸಿ ನಡೆಸಲಾಗಿದೆ. ಹೆದ್ದಾರಿಯಲ್ಲಿ ಅಪಘಾತದಿಂದ ಗಾಯಗೊಂಡವರು ಉಳಿದುಕೊಂಡು ಚಿಕಿತ್ಸೆ ಪಡೆಯಲು ನ್ಯೂರೋ ಪುನರ್ವಸತಿ ಕೇಂದ್ರ ಆರಂಭಿಸಲು ಉದ್ದೇಶಿಸಲಾಗಿದೆ ಎಂದರು.

## 13,532 ಹಾಜರು, 208 ವಿದ್ಯಾರ್ಥಿಗಳು ಗೈರು | ಪರೀಕ್ಷಾ ಕೇಂದ್ರಗಳಲ್ಲಿ ಸೂಕ್ತ ಭದ್ರತೆ

# ಪಿಯುಸಿ ಪರೀಕ್ಷೆ : ಮೊದಲ ದಿನ ಸುಸೂತ್ರ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾದ್ಯಂತ ದ್ವಿತೀಯ ಪಿಯುಸಿ ಪರೀಕ್ಷೆ ಶನಿವಾರ ಯಾವುದೇ ಗೊಂದಲವಿಲ್ಲದೆ ಸುಗಮವಾಗಿ ನಡೆಯಿತು. ಪ್ರಥಮ ಭಾಷೆಯಾದ ಕನ್ನಡ ಪರೀಕ್ಷೆಗೆ ಒಟ್ಟು 208 ವಿದ್ಯಾರ್ಥಿಗಳು ಗೈರಾಗಿದ್ದರು.

ಜಿಲ್ಲೆಯಾದ್ಯಂತ ನೋಂದಾಯಿಸಿಕೊಂಡಿದ್ದ 13,740 ವಿದ್ಯಾರ್ಥಿಗಳ ಪೈಕಿ 13,532 ಮಂದಿ ಪರೀಕ್ಷೆಗೆ ಹಾಜರಾಗಿದ್ದರು. ಗೈರಾದವರ ಪೈಕಿ ಹಾಸನ ತಾಲ್ಲೂಕಿನಿಂದ 40, ಚನ್ನರಾಯಪಟ್ಟಣ 35, ಅರಕಲಗೂಡು 39, ಅರಸೀಕೆರೆ 48, ಹೊಳೆನರಸೀಪುರ 15, ಬೇಲೂರು 8, ಸಕಲೇಶಪುರ 18 ಹಾಗು ಆಲೂರು ತಾಲ್ಲೂಕಿನಿಂದ 5 ವಿದ್ಯಾರ್ಥಿಗಳು ಪರೀಕ್ಷೆಯಿಂದ ಹೊರಗುಳಿದರು.

ಜಿಲ್ಲಾ ಆಡಳಿತ ಹಾಗು ಪದವಿ ಪೂರ್ವ ಶಿಕ್ಷಣ ಇಲಾಖೆ ಪರೀಕ್ಷೆಗಾಗಿ ಸಂಪೂರ್ಣ ಸಿದ್ಧತೆ ಕೈಗೊಂಡಿತ್ತು. ಬೆಳಿಗ್ಗೆ 10 ಗಂಟೆಗೆ ಆರಂಭವಾದ ಪರೀಕ್ಷೆ ಎಲ್ಲಾ ಕೇಂದ್ರಗಳಲ್ಲೂ ಶಾಂತಿಯುತವಾಗಿ ನಡೆಯಿತು. ಜಿಲ್ಲೆಯಾದ್ಯಂತ ಒಟ್ಟು 33 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದ್ದು, ಎಲ್ಲೆಡೆ ಸೂಕ್ತ ಭದ್ರತೆ, ಮೂಲಸೌಕರ್ಯ ಹಾಗು




ಮೇಲ್ವಿಚಾರಣೆಯ ವ್ಯವಸ್ಥೆ ಕಲ್ಪಿಸಲಾಗಿತ್ತು.

ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯನ್ನು ಬಿಎನ್‌ಎಸ್ 155ರ ಅನ್ವಯ ನಿಷೇಧಿತ ಪ್ರದೇಶವೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಘೋಷಿಸಿದ್ದರು. ಪ್ರತಿ ಕೇಂದ್ರದಲ್ಲೂ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು. ಪ್ರಶ್ನೆ ಪತ್ರಿಕೆಯನ್ನು ಜಿಲ್ಲಾ ಖಜಾನೆಯಿಂದ ತಹಶೀಲ್ದಾರ್ ಹಾಗು ಪ್ರಾಂಶುಪಾಲರ ಸಮಿತಿ ಮೇಲ್ವಿಚಾರಣೆಯಲ್ಲಿ ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆ ಹೊಂದಿದ ವಾಹನಗಳ ಮೂಲಕ 10 ಮಾರ್ಗಗಳಲ್ಲಿ ಸುರಕ್ಷಿತವಾಗಿ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲಾಯಿತು.

ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಮೊಬೈಲ್, ಸ್ಮಾರ್ಟ್‌ವಾಚ್, ಬ್ಲೂಟೂತ್ ಸೇರಿ ಯಾವುದೇ ವಿದ್ಯುನ್ಮಾನ ಉಪಕರಣ ನಿಷೇಧಿಸಲಾಗಿತ್ತು. ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಬೇರೆ ಯಾರಿಗೂ ಕೇಂದ್ರಕ್ಕೆ ಅವಕಾಶ ನೀಡಿರಲಿಲ್ಲ. ಅಕ್ರಮ ತಡೆಯುವ ಉದ್ದೇಶದಿಂದ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮೆರಾ ಕಣ್ಗಾವಲು ವ್ಯವಸ್ಥೆ ಮಾಡಲಾಗಿತ್ತು. ಪರೀಕ್ಷೆ ನಡೆಯುವ ಅವಧಿಯಲ್ಲಿ ಕೇಂದ್ರಗಳ ಸಮೀಪದ ಜೆರಾಕ್ಸ್ ಹಾಗು ಸೈಬರ್ ಕೇಂದ್ರಗಳನ್ನು ಮುಚ್ಚುವಂತೆ ಆದೇಶಿಸಲಾಗಿತ್ತು. ಜಾಗೃತ ದಳ ಹಾಗು

» ನಾಲ್ಕನೇ ಪುಟದಲ್ಲಿ

### ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ ಸಂಸದ

ಸಂಸದ ಶ್ರೇಯಸ್ ಪಟೇಲ್ ಅವರು ಪರೀಕ್ಷೆ ಆರಂಭವಾಗುವುದಕ್ಕೂ ಮೊದಲು ನಗರದ ಗಂಧದಕೋಟೆಯಲ್ಲಿರುವ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ ಪರೀಕ್ಷಾರ್ಥಿಗಳಿಗೆ ಶುಭ ಹಾರೈಸಿದರು. ಪರೀಕ್ಷಾ ಕೊಠಡಿಗಳಿಗೆ ತೆರಳಿ ವಿದ್ಯಾರ್ಥಿಗಳೊಂದಿಗೆ ಮಾತುಕತೆ ನಡೆಸಿದ ಅವರು, ಯಾವುದೇ ರೀತಿಯ ಭಯವಿಲ್ಲದೆ ಧೈರ್ಯದಿಂದ ಪ್ರಶ್ನೆಗಳನ್ನು ಓದಿ ಉತ್ತಮವಾಗಿ ಉತ್ತರಿಸಿ ಹೆಚ್ಚಿನ ಅಂಕ ಗಳಿಸಬೇಕೆಂದು ಪ್ರೋತ್ಸಾಹಿಸಿದರು.

CMYK CMYK CMYK CMYK

# ಸಮಸ್ಯೆಗಳ ಸೂತ್ರಧಾರ ನೆಹರು

ವೀಕೆಂಡ್ ವಿತ್ ಮೋಹನ್

ಅಧಿಕಾರ ಮತ್ತು ಸ್ವಾರ್ಥಕ್ಕಾಗಿ ಏನನ್ನಾದರೂ ಮಾಡಲು ಸಿದ್ಧವಿದ್ದ ನೆಹರುರವರ ಕೈಗೆ ಸ್ವತಂತ್ರ ಭಾರತದ ಮೊದಲ ಆಡಳಿತ ಸಿಕ್ಕಿತು. ಅಧಿಕಾರಕ್ಕಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಅವರ ಶಿಷ್ಯನಿಂದಲೇ ಚುನಾವಣೆಯಲ್ಲಿ ಸೋಲುವಂತೆ ಮಾಡಿದ್ದು ನೆಹರು. 1955ರಲ್ಲಿ ನೆಹರು ಪ್ರಧಾನಮಂತ್ರಿಯಾಗಿದ್ದಾಗ ಭಾರತಕ್ಕೆ ಅಮೆರಿಕವು ಸುವರ್ಣಾವಕಾಶವೊಂದನ್ನು ನೀಡಿತ್ತು.



ಚೀನಾವನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಿಂದ ಹೊರಗಿಟ್ಟು ಭಾರತವನ್ನು ಶಾಶ್ವತ ಸದಸ್ಯನಾಗುವಂತೆ ಹೇಳಿತ್ತು. ಆ ಅವಕಾಶವನ್ನು ಬಳಸಿಕೊಳ್ಳದ ನೆಹರು ಅಮೆರಿಕದ ಸೂಚನೆಯನ್ನು ತಿರಸ್ಕರಿಸಿದರು. ದೇಶದ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ನೆಹರು ಹೇಳಿದ್ದು ಹೀಗಿತ್ತು: ನಾವು ಚೀನಾವನ್ನು ಭದ್ರತಾ ಮಂಡಳಿಯಿಂದ ದೂರವಿಡುವುದು ಅನ್ಯಾಯದ ಕೆಲಸ. ಆದ್ದರಿಂದ ಅಮೆರಿಕದ ಸಲಹೆಯನ್ನು ನಾವು ತಿರಸ್ಕರಿಸಬೇಕು.

ಭಾರತದ ಈಗಿನ ಪರಿಸ್ಥಿತಿಯಲ್ಲಿ ಭದ್ರತಾ ಮಂಡಳಿಯ ಸದಸ್ಯರಾಗುವುದು ಸರಿಯಲ್ಲ. ಮೊದಲು ಚೀನಾ ದೇಶಕ್ಕೆ ದಕ್ಕಬೇಕಿರುವ ಅಧಿಕಾರವನ್ನು ನೀಡಿದ ಮೇಲಷ್ಟೇ ಅಮೆರಿಕವು ಭಾರತವನ್ನು ಪರಿಗಣಿಸಲಿ. ನೆಹರು ಬರೆದ ಈ ಪತ್ರ, ಭಾರತದ ಬಗೆಗಿನ ಅವರ ದೂರ ದೃಷ್ಟಿಯ ಕೊರತೆಯನ್ನು ಎತ್ತಿ ತೋರಿಸುತ್ತದೆ.

ಅಂದಿನ ಕಾಲದಲ್ಲಿ ಅಮೆರಿಕ ಎರಡನೇ ಮಹಾಯುದ್ಧದಲ್ಲಿ ವಿಜಯಶಾಲಿಯಾಗಿ ಜಗತ್ತಿನ ದೊಡ್ಡಣ್ಣನಾಗಿ ಹೊರಹೊಮ್ಮಿತ್ತು. ಜಗತ್ತಿನಲ್ಲಿ ಚೀನಾದ ಗುರುತೇ ಇಲ್ಲದ ಸಮಯದಲ್ಲಿ, ಅಮೆರಿಕದ ಮಾತನ್ನು ನೆಹರು ಕೇಳಲಿಲ್ಲ. ಅಂದು ಚೀನಾ ದೇಶದ ಪರವಾಗಿ ನಿಂತ ಭಾರತಕ್ಕೆ ಸಿಕ್ಕ ಉಡುಗೊರೆ ಏನು? 1962ರಲ್ಲಿ ಕಾಲು ಕೆದರಿಕೊಂಡು ಚೀನಾ ಯುದ್ಧಕ್ಕೆ ಬಂತು.

ಇಂದಿಗೂ ಡೋಕ್ಲಾಂ ವಿಚಾರದಲ್ಲಿ ಜಗಳ ಮಾಡುತ್ತಲೇ ಇದೆ. ಅಂದು ಚೀನಾದ ಪರವಾಗಿ ನೆಹರು ನಿಂತರು. ಇಂದು ಚೀನಾ ದೇಶವು, ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯಲ್ಲಿನ ಭಾರತದ ಶಾಶ್ವತ ಸದಸ್ಯತ್ವಕ್ಕೆ ಅಡ್ಡಗಾಲು ಹಾಕುತ್ತಿದೆ. ಪ್ರತಿಯೊಂದು ಬಾರಿಯೂ ಜಗತ್ತಿನ ಇತರ ದೇಶಗಳು ಭಾರತದ ಪರವಾಗಿ ನಿಂತರೂ ಚೀನಾ ಮಾತ್ರ ಭಾರತದ ಪರವಾಗಿ ನಿಲ್ಲುತ್ತಿಲ್ಲ.

ನೆಹರು ಮಾಡಿದ್ದ ಪ್ರಮಾದವನ್ನು ಅವರದ್ದೇ ಪಕ್ಷದ ನಾಯಕ ಶಶಿ ತರೂರ್ ಒಪ್ಪಿಕೊಂಡಿದ್ದರು. ಪ್ರಧಾನಿಯಾದವರು ತಮ್ಮ ದೇಶವನ್ನು ಮುಂದುವರಿಸಲು ಬಯಸುತ್ತಾರೋ ಅಥವಾ ಬೇರೆಯವರಿಗೆ ಸಹಾಯಮಾಡಿ ತಾವು ಹಿಂದೆ ಹೋಗಲು ಬಯಸುತ್ತಾರೋ? ಆ ಮಟ್ಟದ ತಿಳಿವಳಿಕೆ ಇಲ್ಲದ ವ್ಯಕ್ತಿಯನ್ನು ದೇಶದ ಮೊದಲ ಪ್ರಧಾನಿಯನ್ನಾಗಿ ಪಡೆದದ್ದು ನಮ್ಮ ದೌರ್ಭಾಗ್ಯ.

1962ರ ಭಾರತ-ಚೀನಾ ಯುದ್ಧದಲ್ಲಿ ಜಮ್ಮು ಮತ್ತು ಕಾಶ್ಮೀರದ ಪೂರ್ವ ಭಾಗದ ಆಕ್ಸೈಚಿನ್ ಪ್ರಾಂತ್ಯವನ್ನು ಚೀನಾ ದೇಶ ವಶಪಡಿಸಿಕೊಂಡಿತು. ಈ ಭಾಗ ಸುಮಾರು 2150 ಕಿ.ಮೀ. ಗಡಿಯನ್ನು ಹೊಂದಿದೆ. ನೆಹರುರ ಪ್ರಮಾದದಿಂದಾಗಿ ಅಂದು ಆ ದೊಡ್ಡ ಭೂಭಾಗವನ್ನು ಭಾರತ ಕಳೆದುಕೊಳ್ಳಬೇಕಾಯಿತು.

ಇಂಥ ಭೂಭಾಗವನ್ನು ಕಳೆದುಕೊಂಡ ಮೇಲೆ, ಈ ಭಾಗದಲ್ಲಿ ಒಂದು ಹುಲ್ಲುಕಡ್ಡಿಯೂ ಬೆಳೆಯುವುದಿಲ್ಲ, ಆದ್ದರಿಂದ ನಮಗೆ ಯಾವ ನಷ್ಟವೂ ಇಲ್ಲ ಎಂಬ ಉಡಾಫೆ ಮಾತನ್ನು ನೆಹರು ಹೇಳಿದ್ದರು. ಆಪರೇಷನ್ ಸಿಂದೂರ ಕಾರ್ಯಾಚರಣೆಯ ಬಗ್ಗೆ ಹಗುರವಾಗಿ ಮಾತನಾಡುವ ರಾಹುಲ್ ಗಾಂಧಿ ಮತ್ತು ಅವರ ಪಟಾಲಂ, ನೆಹರು ಹೇಳಿದ್ದ ಈ ಮಾತಿಗೆ ಉತ್ತರ ಕೊಡಲು ಸಾಧ್ಯವೇ? ಭಾರತದ ದೊಡ್ಡದೊಂದು ಭೂಭಾಗವನ್ನು ಕಳೆದುಕೊಂಡ ನಂತರ ಸ್ವತಃ ಭಾರತದ ಪ್ರಧಾನಿಯೇ ಹೀಗೆ ಹೇಳಿದಾಗ, ಚೀನಾಕ್ಕೆ ಭಯ ಎಲ್ಲಿಂದ ಬರಬೇಕು? ನೆಹರು ಭಾರತೀಯ ಸೈನ್ಯವನ್ನು ನಿಶ್ಶಕ್ತೀಕರಣ ಮಾಡಿದ ಪರಿಣಾಮ ಭಾರತದ ಇತಿಹಾಸದಲ್ಲಿ ದೊಡ್ಡದೊಂದು ಪ್ರಮಾದ ನಡೆದು ಹೋಗಿತ್ತು.

ಚೀನಾ ಹಾಗು ಪಾಕಿಸ್ತಾನದ ನಡುವೆ ದೊಡ್ಡದೊಂದು ಆರ್ಥಿಕ ಕಾರಿಡಾರ್ ನಿರ್ಮಿಸುತ್ತಿರುವ ಚೀನಾ, ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಸುಮಾರು 12 ಬಿಲಿಯನ್ ಡಾಲರ್ ನಷ್ಟು, ಅಂದರೆ ಸುಮಾರು 100000 ಕೋಟಿ ರುಪಾಯಿಯಷ್ಟು ಹಣವನ್ನು ಖರ್ಚು ಮಾಡಿದೆ. ಚೀನಾ ನಿರ್ಮಿಸುತ್ತಿರುವ ಈ ಕಾರಿಡಾರ್, ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಹಾದು ಹೋಗುತ್ತದೆ.

1948ರಲ್ಲಿ ನೆಹರು ಮಾಡಿದ ಪ್ರಮಾದದಿಂದಾಗಿ, ಭಾರತಕ್ಕೆ ಸೇರಿದ ಭೂಭಾಗದೊಳಗೆ ಚೀನಾ ತನ್ನ ಆರ್ಥಿಕ ಕಾರಿಡಾರ್ ನಿರ್ಮಾಣ ಮಾಡುವಂತಾಗಿದೆ. ಆಪರೇಷನ್ ಸಿಂದೂರ ಬಳಿಕ, ಪಾಕ್ ಆಕ್ರಮಿತ ಕಾಶ್ಮೀರವನ್ನು ಹಿಂಪಡೆಯುವ ಬಗ್ಗೆ ಮಾತನಾಡುವ ಕಾಂಗ್ರೆಸ್ಸಿಗರು, ತಮ್ಮ ಅವಧಿಯಲ್ಲಾದ ಪ್ರಮಾದದ ಬಗ್ಗೆ ಮಾತನಾಡುವುದಿಲ್ಲ.

1962ರ ಭಾರತದ ವಿರುದ್ಧದ ಯುದ್ಧದ ನಂತರ, 1963ರಲ್ಲಿ ಪಾಕಿಸ್ತಾನವು, ಪಾಕ್ ಆಕ್ರಮಿತ ಕಾಶ್ಮೀರ (ಗಿಲ್ಗಿಟ್ ಬಾಲ್ಟಿಸ್ತಾನ್)ದಲ್ಲಿರುವ ಶಕ್ ಗಮ್ ಕಣಿವೆಯನ್ನು ಚೀನಾ ದೇಶಕ್ಕೆ ನೀಡಿತು. ಆಗಲೂ ನೆಹರು ಪ್ರತಿಭಟಿಸಲಿಲ್ಲ. ಆಪರೇಷನ್ ಸಿಂದೂರದ ಬಗ್ಗೆ ಹಗುರವಾಗಿ ಮಾತನಾಡುವ ಕಾಂಗ್ರೆಸ್ಸಿನ ಬಾಲಂಗೋಚಿಗಳು, ನೆಹರು ಮಾಡಿದ ಈ ಪ್ರಮಾದದ ಬಗ್ಗೆಯೂ ಮಾತನಾಡಬೇಕು.

ಡೋಕ್ಲಾಂ ಭಾರತಕ್ಕೆ ಅತ್ಯಂತ ಮಹತ್ವಪೂರ್ಣವಾದ ಭೂಭಾಗ. ಇದು ಭಾರತ, ಚೀನಾ ಹಾಗೂ ಭೂತಾನ್ ಗಡಿಗಳು ಸೇರುವ ತ್ರಿಕೋನ ಸಂಧಿಸ್ಥಾನದಂಥ ಜಾಗದಲ್ಲಿದೆ. ಚೀನಾ ಈ ಜಾಗದಲ್ಲಿ ರಸ್ತೆ ಮತ್ತು ಸೇತುವೆಗಳನ್ನು ನಿರ್ಮಿಸಿದರೆ ತನ್ನ ಶಸ್ತ್ರಾಸ್ತ್ರಗಳನ್ನು ಭಾರತದ ಗಡಿಯತ್ತ ಸಾಗಿಸಲು ಸುಲಭವಾಗುತ್ತದೆ ಎಂಬ ಭ್ರಮೆಯಲ್ಲಿತ್ತು. ಇದನ್ನರಿತ ನರೇಂದ್ರ ಮೋದಿಯವರು ಚೀನಾದ ಕಾಮಗಾರಿಯನ್ನು ತಡೆದರು.

ಜತೆಗೆ ಭೂತಾನ್ ದೇಶಕ್ಕೆ ದೊಡ್ಡಮಟ್ಟದ ಹಣದ ಸಹಾಯ ಮಾಡಿ ಉತ್ತಮ ಬಾಂಧವ್ಯವನ್ನು ರೂಪಿಸಿದರು. ಮಾತುಮಾತಿಗೂ, ಮೋದಿಯವರು ಹೊರದೇಶಕ್ಕೆ ಪ್ರಯಾಣ ಮಾಡುತ್ತಾರೆ ಎಂದು ಚೀರಾಡುವ ಕಾಂಗ್ರೆಸ್ಸಿಗರಿಗೆ ಈ ವಿಷಯದ ಜ್ಞಾನವಿಲ್ಲ. ಈಶಾನ್ಯ ಭಾರತದ ಏಳು ರಾಜ್ಯಗಳನ್ನು ತಲುಪಲು ಅತಿ ಮುಖ್ಯವಾದ ಜಾಗ ಸಿಲಿಗುರಿ ಕಾರಿಡಾರ್. ಇದೊಂದು ಸಣ್ಣ ಭೂಭಾಗ. ಈ ಭೂಭಾಗವನ್ನು ಚಿಕನ್ ನೆಕ್ ಎಂದು ಕರೆಯುತ್ತಾರೆ.

ಕೇವಲ 200 ಕಿ.ಮೀ. ಉದ್ದ ಹಾಗೂ 60 ಕಿ.ಮೀ. ಅಗಲವಿರುವ ಭೂಭಾಗವಿದು. ಈ ಕಾರಿಡಾರ್‌ನ ಅತ್ಯಂತ ಸಣ್ಣ ಭಾಗ ಕೇವಲ 17 ಕಿ.ಮೀ.ಇದೆ. ಈ ಕಿರಿದಾದ ಭೂಭಾಗದಿಂದ ಮಾತ್ರ ಈಶಾನ್ಯ ಭಾರತದ ರಾಜ್ಯಗಳಿಗೆ ಸಂಪರ್ಕ ಸಾಧ್ಯ. ಗೂಗಲ್ ಮ್ಯಾಪ್ ಓಪನ್ ಮಾಡಿ ಈಶಾನ್ಯ ಭಾರತದೆಡೆಗೆ ಗಮನ ಹರಿಸಿದರೆ ಚಿಕನ್ ನೆಕ್ ಕಾಣಿಸುತ್ತದೆ.

1971ರ ಯುದ್ಧದ ನಂತರ ಇಂದಿರಾ ಗಾಂಧಿಯವರು ಬಾಂಗ್ಲಾದೇಶದ ಜತೆ ಮಾತುಕತೆ ನಡೆಸಿ ಈ ಭೂಭಾಗವನ್ನು ಮತ್ತಷ್ಟು ವಿಸ್ತರಿಸಬೇಕಿತ್ತು. ಅವರಿಗೂ ಭಾರತದ ಭದ್ರತೆಯ ದೂರದೃಷ್ಟಿಯಿರಲಿಲ್ಲ. ನೆಹರು ಕುಟುಂಬಸ್ಥರು ಮಾಡಿದ ಅನೇಕ ಪ್ರಮಾದಗಳಿಂದಾಗಿ, ಭಾರತವು ಜಗತ್ತಿನಲ್ಲಿ ತನ್ನ ಸ್ಥಾನವನ್ನು ಮೇಲೇರಿಸಿಕೊಳ್ಳಲು ಹಲವು ದಶಕಗಳೇ ಬೇಕಾದವು.

ನರೇಂದ್ರ ಮೋದಿಯವರು ಅಮೆರಿಕದೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಂಡಿದ್ದಕ್ಕೇ, ಪಾಕಿಸ್ತಾನದ ಭಯೋತ್ಪಾದಕರ ನೆಲೆಗಳ ಮೇಲೆ ಬಾಂಬ್ ಹಾಕಿದಾಗ, ಪಕ್ಕದ ಚೀನಾ ತುಟಿ ಬಿಚ್ಚಲಿಲ್ಲ. ಅದೇ ಜಾಗದಲ್ಲಿ ನೆಹರು ಇದ್ದಿದ್ದರೆ ಏನಾಗುತ್ತಿತ್ತು ಯೋಚಿಸಿ ನೋಡಿ? 2008ರಲ್ಲಿ ಮುಂಬೈನ ಬೀದಿಗಳಲ್ಲಿ ನಾಗರಿಕರ ಮೇಲೆ ಭಯೋತ್ಪಾದಕರು ದಾಳಿ ಮಾಡಿದಾಗ, ಕಾಂಗ್ರೆಸ್ಸಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಚೀನಾಕ್ಕೆ ಹೆದರಿ ಪಾಕಿಸ್ತಾನಕ್ಕೆ ಸಣ್ಣ ವಾರ್ನಿಂಗ್ ಸಹ ನೀಡಲಿಲ್ಲ.

2011ರಲ್ಲಿ ಅಮೆರಿಕ ತನ್ನ ಅಣು ವಿದ್ಯುತ್ ಸ್ಥಾವರದ ತ್ಯಾಜ್ಯವನ್ನು ತಂದು ಭಾರತದಲ್ಲಿ ಸುರಿಯಲು ಮುಂದಾದಾಗ, ಮನಮೋಹನ್ ಸಿಂಗ್ ಒಪ್ಪಿಗೆ ಕೊಡಲು ತಯಾರಾಗಿದ್ದರು. ಇಂದು ಭಾರತ ಬದಲಾಗಿದೆ. ಕರೋನ ನಿಯಂತ್ರಿಸಲು ಅಮೆರಿಕಕ್ಕೆ ಬೇಕಾಗಿದ್ದ ಹೈಡ್ರೋ ಕ್ಲೋರೋಕ್ವಿನ್ ಮಾತ್ರೆಗಳನ್ನು ಟನ್‌ಗಟ್ಟಲೆ ನೀಡಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಾತುಮಾತಿಗೂ ನನ್ನ ಮಿತ್ರ, ಮೋದಿ ಎಂದು ಇಡೀ ಜಗತ್ತಿನ ಮುಂದೆ ಹೇಳುತ್ತಾರೆ. ಒಂದು ಸಲವಾದರೂ ಜಗತ್ತಿನ ಮುಂದುವರಿದ ರಾಷ್ಟ್ರಗಳು ಕಾಂಗ್ರೆಸ್ ಆಡಳಿತಾವಧಿಯಲ್ಲಿ, ಭಾರತದ ಪ್ರಧಾನಿಯ ಬಗ್ಗೆ ಈ ಮಟ್ಟಿಗೆ ಮಾತನಾಡಿರಲಿಲ್ಲ.

ಕಾಂಗ್ರೆಸ್ಸಿನ ಆಡಳಿತ ಯಾವ ರೀತಿ ಇತ್ತೆಂದರೆ, ಭಾರತದ ಆಂತರಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ವಿಶ್ವ ನಾಯಕರ ಅನುಮತಿ ಬೇಕಿತ್ತು. ಪಾಕಿಸ್ತಾನಕ್ಕೆ ಹೆದರಿ ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಿಲ್ಲ. ಪಾಕಿಸ್ತಾನಕ್ಕೆ ಚೀನಾ ಮತ್ತು ಅಮೆರಿಕದ ನೆರವಿದೆ ಎಂಬ ಭ್ರಮೆಯಲ್ಲಿ ಕಾಂಗ್ರೆಸ್ ಆಡಳಿತ ನಡೆಸುತ್ತಿತ್ತು.

ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸಿದರೆ, ವಿಶ್ವದ ಎರಡು ಬಲಿಷ್ಠ ರಾಷ್ಟ್ರಗಳು ನಮ್ಮ ನೆರವಿಗೆ ಬರುವುದಿಲ್ಲವೆಂಬ ಭಯವಿತ್ತು. ಮನಮೋಹನ್ ಸಿಂಗ್ ಅತ್ಯುತ್ತಮ ಪ್ರಧಾನಿಯೆಂದು ಬಾಯಿ ಬಡಿದುಕೊಳ್ಳುವ ಕಾಂಗ್ರೆಸ್ಸಿಗರಿಗೆ, ಯಾಕೆ ನಮ್ಮ ದೇಶದ ಆಂತರಿಕ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಅವರು ವಿಫಲರಾದರೆಂದು ಕೇಳಿದರೆ, ಉತ್ತರ ಸಿಗುವುದಿಲ್ಲ.



2019ರಲ್ಲಿ, 7 ದಶಕಗಳ ಕಾಶ್ಮೀರ ಸಮಸ್ಯೆಯನ್ನು, ಮೋದಿಯವರು ಎರಡನೇ ಬಾರಿ ಅಧಿಕಾರಕ್ಕೆ ಬಂದ 6 ತಿಂಗಳೊಳಗೆ ಬಗೆಹರಿಸಿದರು. ಚೀನಾ ಕೂಡ ತುಟಿ ಬಿಚ್ಚಲಿಲ್ಲ. ಅಮೆರಿಕಾ ಕಡ್ಡಿ ಎರಡು ತುಂಡಾದ ಹಾಗೆ ಇದು ಭಾರತದ ಆಂತರಿಕ ಸಮಸ್ಯೆ ಎಂದು ಹೇಳಿತು. ಇದು ನರೇಂದ್ರ ಮೋದಿಯವರ ವಿಶ್ವ ಪರ್ಯಟನೆಯ ಪ್ರಭಾವ. ತಾವು ಸೃಷ್ಟಿಸಿದ ಪ್ರಮಾದಗಳನ್ನು ಸರಿಪಡಿಸುವ ಅನೇಕ ಅವಕಾಶಗಳು ಸ್ವತಃ ನೆಹರುರಿಗೆ ಸಿಕ್ಕರೂ ಅವರು ಸರಿಪಡಿಸಲಿಲ್ಲ.

ನಂತರ ಇಂದಿರಾ ಗಾಂಧಿಯವರು ತಮಗಿದ್ದ ಚಿನ್ನದಂಥ ಅವಕಾಶವನ್ನು 1971ರಲ್ಲಿ ಬಳಸಿಕೊಳ್ಳಲಿಲ್ಲ. ಕಾಂಗ್ರೆಸ್ಸಿನ ಅವಧಿಯಲ್ಲಿ ಅಖಂಡ ಭಾರತದ ಸಾವಿರಾರು ಕಿ.ಮೀ. ಭೂಭಾಗವನ್ನು ಪಾಕಿಸ್ತಾನ ಮತ್ತು ಚೀನಾಕ್ಕೆ ಬಿಟ್ಟುಕೊಡಲಾಗಿದೆ. ಭಾರತವನ್ನು ಏಳು ದಶಕಗಳ ಕಾಲ ಆಳಿದ ಕಾಂಗ್ರೆಸ್ ಪಕ್ಷವು ಪಾಕಿಸ್ತಾನ ಮತ್ತು ಚೀನಾದ ವಿರುದ್ಧ ತೋರಿದ ಮೃದುಧೋರಣೆ ಇಷ್ಟಕ್ಕೆಲ್ಲ ಕಾರಣ.

ಭಾರತದ ನೆಲ-ಜಲದ ಬಗ್ಗೆ ಕಾಳಜಿ ಇಲ್ಲದವರ ಬಾಯಲ್ಲಿ ದೇಶದ ಭದ್ರತೆಯ ಮಾತುಗಳನ್ನು ಕೇಳಿದಾಗ ನಗು ಬರುತ್ತದೆ. 1993, 1996, 2008ರಲ್ಲಿ ಚೀನಾದೊಂದಿಗೆ ಗಡಿ ಒಪ್ಪಂದವನ್ನು ಮಾಡಿಕೊಂಡಾಗ ಅಧಿಕಾರದಲ್ಲಿದ್ದದ್ದು ಕಾಂಗ್ರೆಸ್ ಸರಕಾರ. ಭಾರತದ ಇತಿಹಾಸದಲ್ಲಿ ನಡೆದ ಅನೇಕ ಸಮಸ್ಯೆಗಳ ಸೂತ್ರಧಾರ ಮತ್ತು ಪ್ರತಿ ಬಾರಿಯೂ ದೇಶದ ಹಿತಾಸಕ್ತಿಯೊಂದಿಗೆ ರಾಜಿ ಮಾಡಿಕೊಂಡ ವ್ಯಕ್ತಿ ಜವಾಹರಲಾಲ್ ನೆಹರು.


**- ಮೋಹನ್ ವಿಶ್ವ**

## ಅಂದಿನ ಕಾಲದಲ್ಲಿ....

- ಅಮೆರಿಕ ಎರಡನೇ ಮಹಾಯುದ್ಧದಲ್ಲಿ ವಿಜಯಶಾಲಿಯಾಗಿ ಜಗತ್ತಿನ ದೊಡ್ಡಣ್ಣನಾಗಿ ಹೊರಹೊಮ್ಮಿತ್ತು.
- ಜಗತ್ತಿನಲ್ಲಿ ಚೀನಾದ ಗುರುತೇ ಇಲ್ಲದ ಸಮಯದಲ್ಲಿ, ಅಮೆರಿಕದ ಮಾತನ್ನು ನೆಹರು ಕೇಳಲಿಲ್ಲ.
- ಅಂದು ಚೀನಾ ದೇಶದ ಪರವಾಗಿ ನಿಂತ ಭಾರತಕ್ಕೆ ಸಿಕ್ಕ ಉಡುಗೊರೆ ಏನು?
- 1962ರಲ್ಲಿ ಕಾಲು ಕೆದರಿಕೊಂಡು ಚೀನಾ ಯುದ್ಧಕ್ಕೆ ಬಂತು.
- ಇಂದಿಗೂ ಡೋಕ್ಲಾಂ ವಿಚಾರದಲ್ಲಿ ಜಗಳ ಮಾಡುತ್ತಲೇ ಇದೆ.
- ಅಂದು ಚೀನಾದ ಪರವಾಗಿ ನೆಹರು ನಿಂತರು.
- ಇಂದು ಚೀನಾ ದೇಶವು, ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯಲ್ಲಿನ ಭಾರತದ ಶಾಶ್ವತ ಸದಸ್ಯತ್ವಕ್ಕೆ ಅಡ್ಡಗಾಲು ಹಾಕುತ್ತಿದೆ.
- ಪ್ರತಿಯೊಂದು ಬಾರಿಯೂ ಜಗತ್ತಿನ ಇತರ ದೇಶಗಳು ಭಾರತದ ಪರವಾಗಿ ನಿಂತರೂ ಚೀನಾ ಮಾತ್ರ ಭಾರತದ ಪರವಾಗಿ ನಿಲ್ಲುತ್ತಿಲ್ಲ.
- ನೆಹರು ಮಾಡಿದ್ದ ಪ್ರಮಾದವನ್ನು ಅವರದ್ದೇ ಪಕ್ಷದ ನಾಯಕ ಶಶಿ ತರೂರ್ ಒಪ್ಪಿಕೊಂಡಿದ್ದರು.
- ಪ್ರಧಾನಿಯಾದವರು ತಮ್ಮ ದೇಶವನ್ನು ಮುಂದುವರಿಸಲು ಬಯಸುತ್ತಾರೋ ಅಥವಾ ಬೇರೆಯವರಿಗೆ ಸಹಾಯಮಾಡಿ ತಾವು ಹಿಂದೆ ಹೋಗಲು ಬಯಸುತ್ತಾರೋ?
- ಆ ಮಟ್ಟದ ತಿಳಿವಳಿಕೆ ಇಲ್ಲದ ವ್ಯಕ್ತಿಯನ್ನು ದೇಶದ ಮೊದಲ ಪ್ರಧಾನಿಯನ್ನಾಗಿ ಪಡೆದದ್ದು ನಮ್ಮ ದೌರ್ಭಾಗ್ಯ.
- 1962ರ ಭಾರತ-ಚೀನಾ ಯುದ್ಧದಲ್ಲಿ ಜಮ್ಮು ಮತ್ತು ಕಾಶ್ಮೀರದ ಪೂರ್ವ ಭಾಗದ ಆಕ್ಸೈಚಿನ್ ಪ್ರಾಂತ್ಯವನ್ನು ಚೀನಾ ದೇಶ ವಶಪಡಿಸಿಕೊಂಡಿತು.
- ಈ ಭಾಗ ಸುಮಾರು 2150 ಕಿ.ಮೀ. ಗಡಿಯನ್ನು ಹೊಂದಿದೆ. ನೆಹರುರ ಪ್ರಮಾದದಿಂದಾಗಿ ಅಂದು ಆ ದೊಡ್ಡ ಭೂಭಾಗವನ್ನು ಭಾರತ ಕಳೆದುಕೊಳ್ಳಬೇಕಾಯಿತು.
- ಇಂಥ ಭೂಭಾಗವನ್ನು ಕಳೆದುಕೊಂಡ ಮೇಲೆ, ಈ ಭಾಗದಲ್ಲಿ ಒಂದು ಹುಲ್ಲುಕಡ್ಡಿಯೂ ಬೆಳೆಯುವುದಿಲ್ಲ, ಆದ್ದರಿಂದ ನಮಗೆ ಯಾವ ನಷ್ಟವೂ ಇಲ್ಲ ಎಂಬ ಉಡಾಫೆ ಮಾತನ್ನು ನೆಹರು ಹೇಳಿದ್ದರು.
- ಆಪರೇಷನ್ ಸಿಂದೂರ ಕಾರ್ಯಾಚರಣೆಯ ಬಗ್ಗೆ ಹಗುರವಾಗಿ ಮಾತನಾಡುವ ರಾಹುಲ್ ಗಾಂಧಿ ಮತ್ತು ಅವರ ಪಟಾಲಂ, ನೆಹರು ಹೇಳಿದ್ದ ಈ ಮಾತಿಗೆ ಉತ್ತರ ಕೊಡಲು ಸಾಧ್ಯವೇ?



» ನೆಹರು ಮಾಡಿದ್ದ ಪ್ರಮಾದವನ್ನು ಅವರದ್ದೇ ಪಕ್ಷದ ನಾಯಕ ಶಶಿ ತರೂರ್ ಒಪ್ಪಿಕೊಂಡಿದ್ದರು. ಪ್ರಧಾನಿಯಾದವರು ತಮ್ಮ ದೇಶವನ್ನು ಮುಂದುವರಿಸಲು ಬಯಸುತ್ತಾರೋ ಅಥವಾ ಬೇರೆಯವರಿಗೆ ಸಹಾಯ ಮಾಡಿ ತಾವು ಹಿಂದೆ ಹೋಗಲು ಬಯಸುತ್ತಾರೋ? ಆ ಮಟ್ಟದ ತಿಳಿವಳಿಕೆ ಇಲ್ಲದ ವ್ಯಕ್ತಿಯನ್ನು ದೇಶದ ಮೊದಲ ಪ್ರಧಾನಿಯನ್ನಾಗಿ ಪಡೆದದ್ದು ನಮ್ಮ ದೌರ್ಭಾಗ್ಯ.



---

# ಬಯಸುವುದು ಒಂದು ಸಿಗುವುದು ಮತ್ತೊಂದು!

## ಹತ್ತಿದ್ದು ಇವತ್ತೇ ಆದರೆ ಮಾನಸಿಕವಾಗಿ ನಾನು ಹಿಂದೆಯೇ ಹತ್ತಿದ್ದ ಎಂದರಂತೆ....

- ಅದರ ಬಗ್ಗೆ ಕೇಳಿದಾಗ ಅವರು ನನ್ನ ಅಮ್ಮ ಹಾಗೂ ನಾನು ಈ ಪ್ರದೇಶದಲ್ಲಿ ಕುರಿ ಕಾಯಲು ಬಂದಿದ್ದಾಗ ಹಿಮಾಲಯ ಪರ್ವತವನ್ನು ತೋರಿಸಿ, ಮಗಾ ಈ ಪರ್ವತವನ್ನು ಇದುವರೆಗೂ ಯಾರೂ ಹತ್ತಿಲ್ಲ.
- ನೀನು ದೊಡ್ಡವನಾದ ಮೇಲೆ ಹತ್ತು ಎಂದರಂತೆ.
- ಅವರ ತಾಯಿಯ ಆಸೆಯನ್ನು ಅವರು ಈಡೇರಿಸಲು ಅಂದೇ ಅವರು ಮನದಲ್ಲಿಯೇ ನಿಶ್ಚಯಿಸಿ ಮುಂದೆ ಅದೇ ಸಾಧನೆ ಮಾಡಿದರಂತೆ.
- ಈ ಎರಡು ನಿದರ್ಶನಗಳನ್ನು ನೋಡಿದಾಗ ನಾವು ಮೊದಲು ನಾವೇನಾಗಬೇಕೆಂಬುದನ್ನು ನಿರ್ಧರಿಸಿ ಅದೇ ದಿಕ್ಕಿನಲ್ಲಿ ಪ್ರಯತ್ನಿಸಿದರೆ ನಾವು ಆ ಗುರಿಯನ್ನು ತಲುಪಬಹುದು.

ನಿಲ್ದಾಣಕ್ಕೆ ನಡೆಯುವಾಗ ಆಗಾಗ್ಗೆ ಎದ್ದು ಬರುತ್ತಿದ್ದ ಶೂಗಳು ನನ್ನ ನಡಿಗೆಯ ವೇಗವನ್ನು ಕುಂಠಿತಗೊಳಿಸಿದ್ದವು. ನಾನು ತಡವಾಗುತ್ತದೆಯೆಂದು ಭಾವಿಸಿ ಶೂಗಳನ್ನು ಕೈಯಲ್ಲಿ ಹಿಡಿದು ರೈಲ್ವೇ ನಿಲ್ದಾಣ ಸಿಗುವವರೆಗೆ ಓಡಿದೆ. ನನ್ನ ಅದೃಷ್ಟಕ್ಕೆ ರೈಲು ಇನ್ನೂ ಹೋಗಿರಲಿಲ್ಲ. ಟಿಕೇಟ್ ತೆಗೆದುಕೊಂಡು ರೈಲನ್ನು ಹತ್ತಿ ಕುಳಿತೆ. ಇದೇ ಮೊದಲ ಬಾರಿಗೆ ನಾನು ಧಾರವಾಡಕ್ಕೆ ಹೋಗುತ್ತಿದ್ದೆ. ನನ್ನ ಎದುರಿಗೆ ಕುಳಿತಿದ್ದವರ ಬಳಿ ಹೇಗೆ ಹೋಗಬೇಕೆಂದು ಕೇಳಿದಾಗ ಅವರು ಮಾಹಿತಿ ತಿಳಿಸಿದರಲ್ಲದೇ ನನ್ನ ಬಗ್ಗೆ ಕನಿಕರ ತೋರಿ ನಿಮಗೆ ಕೆಲಸ ಸಿಗದಿದ್ದರೆ ನನಗೆ ಕರೆ ಮಾಡಿ ನಾನು ನಿಮಗೆ ಬೇರೊಂದು ಕೆಲಸ ಕೊಡಿಸುತ್ತೇನೆ ಎಂದು ಅವರ ನಂಬರ್ ಕೊಟ್ಟು ಹೋದರು.

ನಮ್ಮ ಜೀವನವು ಈಗಿದ್ದಂತೆಯೇ ಇರುತ್ತೆ ಅಂತಾ ಹೇಳೋಕೆ ಆಗೋಲ್ಲ. ಇಲ್ಲಿ ಟರ್ನಿಂಗ್ ಪಾಯಿಂಟ್‌ಗಳು ಬರುತ್ತವೆ. ಅವು ಕೆಲವರಿಗೆ ಉನ್ನತ ಹಂತಕ್ಕೆ ಕೊಂಡೊಯ್ದರೆ ಕೆಲವರನ್ನು ಕೆಳ ಹಂತಕ್ಕೆ ತಲುಪುವಂತೆ ಮಾಡಬಹುದು. ಇವು ನಮ್ಮ ಹಾರ್ಡ್‌ವರ್ಕ್ ಅನ್ನು ಮೀರಿ ಆಗುವಂತಹವು. ಆಧ್ಯಾತ್ಮದಲ್ಲಿ ಇದನ್ನು ಕರ್ಮ ಫಲ ಅಂತಾ ಹೇಳ್ತಾರೆ. ಕೆಲವರು ನಾವು ಹೇಗೆ ಆಲೋಚಿಸುತ್ತೇವೆಯೋ ಅದೇ ರೀತಿ ಆಗುತ್ತೇವೆ ಯದ್ಭಾವಂ ತದ್ಭವತಿ ಎಂದು ಹೇಳುತ್ತಾರೆ. ಇದನ್ನು ಮ್ಯಾನಿಫೆಸ್ಟೇಶನ್ ಮಾಡೋದು ಅನ್ತಾರೆ. ಇನ್ನೂ ಕೆಲವರು ನಾವು ಏನಾಗಬೇಕೆಂದು ಬಯಸುತ್ತೇವೆಯೋ ಅದು ಮೊದಲೇ ಘಟಿಸಿದಂತೆ ಮಾನಸಿಕವಾಗಿ ಮೊದಲೇ ಕಲ್ಪಿಸಿಕೊಂಡರೆ ಆ ರೀತಿಯೇ ಆಗುತ್ತದೆ ಎಂದು ಹೇಳ್ತಾರೆ! ನಾವೇನಾಗಬೇಕೆಂದು ಬಯಸುತ್ತೇವೆಯೋ ಅದೇ ರೀತಿ ಕಲ್ಪಿಸಿಕೊಳ್ಳುತ್ತಾ ಅದು ಸಬ್ ಕಾನ್ಸಿಯಸ್ ಮೈಂಡ್‌ಗೆ ಹೋದರೆ ಅದು ನಡೆದೇ ನಡೆಯುತ್ತದೆ ಎಂದು ಹೇಳ್ತಾರೆ.

ಅಬ್ದುಲ್ ಕಲಾಮ್‌ರವರು ತಮ್ಮ ಚಿಕ್ಕಂದಿನಲ್ಲಿ ವಿಮಾನ ಹಾರುವುದನ್ನು ನೋಡಿ ಅವರ ಗುರುಗಳಿಗೆ ಅಷ್ಟು ಭಾರವಿರುವ ವಿಮಾನವು ಹಗುರವಾದ ಹಕ್ಕಿ ಹಾರಿದಂತೆ ಹೇಗೆ ಹಾರುತ್ತದೆ? ಎಂದು ಪ್ರಶ್ನಿಸಿದಾಗ ಅವರ ಗುರುಗಳು ಪ್ರಾಮಾಣಿಕವಾಗಿ ನನಗದು ಗೊತ್ತಿಲ್ಲ. ನೀನು ದೊಡ್ಡವನಾದ ಮೇಲೆ ಅದರ ಬಗ್ಗೆ ತಿಳಿ ಎಂದು ಹೇಳಿದಾಗ ಕಲಾಂರವರ ಮನದಲ್ಲಿ ಗುರುಗಳು ಹೇಳಿದ ಮಾತು ನಾಟಿ ಮುಂದೆ ದೊಡ್ಡ ವ್ಯಕ್ತಿಯಾಗಲು ನೆರವಾಯಿತಂತೆ. ಇದೇ ರೀತಿ ತೇನ್ ಸಿಂಗ್‌ರವರು ಹಿಮಾಲಯ ಪರ್ವತ ಏರಿದಾಗ ಪತ್ರಕರ್ತರೊಬ್ಬರು ಈ ವಯಸ್ಸಿನಲ್ಲಿ ವಿಮಾನ ಪರ್ವತ ಹತ್ತಿದ್ದು ಹೇಗೆ ಎಂಬ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದಾಗ ಅವರು ನಗುತ್ತಾ ನಾನು ಹಿಮಾಲಯ ಪರ್ವತ ಹತ್ತಿದ್ದು 10 ನೇ ವಯಸ್ಸಿನಲ್ಲಿಯೇ ಎಂದರಂತೆ. ಅದಕ್ಕೆ ಪತ್ರಕರ್ತರು ನೀವು ಹತ್ತಿದ್ದು ಈಗಲೇ ಅಲ್ಲವೇ? ಎಂದಾಗ ದೈಹಿಕವಾಗಿ ಹತ್ತಿದ್ದು ಇವತ್ತೇ ಆದರೆ ಮಾನಸಿಕವಾಗಿ ನಾನು ಹಿಂದೆಯೇ ಹತ್ತಿದ್ದ ಎಂದರಂತೆ. ಅದರ ಬಗ್ಗೆ ಕೇಳಿದಾಗ ಅವರು ನನ್ನ ಅಮ್ಮ ಹಾಗೂ ನಾನು ಈ ಪ್ರದೇಶದಲ್ಲಿ ಕುರಿ ಕಾಯಲು ಬಂದಿದ್ದಾಗ ಹಿಮಾಲಯ ಪರ್ವತವನ್ನು ತೋರಿಸಿ, ಮಗಾ ಈ ಪರ್ವತವನ್ನು ಇದುವರೆಗೂ ಯಾರೂ ಹತ್ತಿಲ್ಲ. ನೀನು ದೊಡ್ಡವನಾದ ಮೇಲೆ ಹತ್ತು ಎಂದರಂತೆ. ಅವರ ತಾಯಿಯ ಆಸೆಯನ್ನು ಅವರು ಈಡೇರಿಸಲು ಅಂದೇ ಅವರು ಮನದಲ್ಲಿಯೇ ನಿಶ್ಚಯಿಸಿ ಮುಂದೆ ಅದೇ ಸಾಧನೆ ಮಾಡಿದರಂತೆ. ಈ ಎರಡು ನಿದರ್ಶನಗಳನ್ನು ನೋಡಿದಾಗ ನಾವು ಮೊದಲು ನಾವೇನಾಗಬೇಕೆಂಬುದನ್ನು ನಿರ್ಧರಿಸಿ ಅದೇ ದಿಕ್ಕಿನಲ್ಲಿ ಪ್ರಯತ್ನಿಸಿದರೆ ನಾವು ಆ ಗುರಿಯನ್ನು ತಲುಪಬಹುದು.

ಒಂದೊಮ್ಮೆ ಈ ರೀತಿ ಭಾವಿಸಿಯೂ, ಪ್ರಾಮಾಣಿಕ ಪ್ರಯತ್ನ ಪಟ್ಟಾಗ್ಯೂ ಆ ಗುರಿ ಈಡೇರದೇ ಇದ್ದಾಗ ಅದಕ್ಕೇ ಜೋತು ಬೀಳದೇ ಬೇರೊಂದು ಕಾರ್ಯದಲ್ಲಿ ತೊಡಗಿಕೊಂಡು ಮೊದಲ ಗುರಿಯತ್ತ ಪ್ರಯತ್ನ ಮಾಡುತ್ತಿರಬೇಕು. ನನ್ನದೇ ಜೀವನದಲ್ಲಿ ನಾನು ಶಿಕ್ಷಕ ಆಗಲೇಬೇಕು ಎಂದು ಅಷ್ಟೆಲ್ಲಾ ಶ್ರಮ ಹಾಕಿಯೂ ಕೂಡ ನಾನು ಮೊದಲ ಸಲ ವಿಫಲನಾದೆ. ಆದರೆ ಕೊರಗುತ್ತಾ ಕೂರಲಿಲ್ಲ. ಬದಲಿಗೆ ಬೇರೆ ಬೇರೆ ಅವಕಾಶಗಳನ್ನು ಹುಡುಕುತ್ತಾ ಹೊರಟೆ. ಈ ಹಿಂದಿನ ಸಂಚಿಕೆಯಲ್ಲಿ ತಿಳಿಸಿದಂತೆ ನನಗೆ ಕೆಲಸ ಕೊಡಿಸುತ್ತೇನೆಂದು ಆನಂದ ಹೇಳಿದ ಮಾತನ್ನು ನಂಬಿ ನಾನು ಬೆಂಗಳೂರಿಗೆ ಹೋಗುವುದನ್ನು ಬಿಟ್ಟೆ. ಸಂಜೆ ಆನಂದನ ರೂಮಿನ ಕಡೆ ಹೊರಟೆ. ಅವನು ಈ ಮೊದಲು ಮೆಡಿಕಲ್ ರೆಪ್ ಆಗಿ ಕೆಲಸ ಮಾಡುತ್ತಿದ್ದ ಮುನೀಶ್ ಎಂಬುವವರಿಗೆ ಕರೆ ಮಾಡಿ ನನ್ನ ಬಗ್ಗೆ ತಿಳಿಸಿ ಕೆಲಸ ಕೊಡಿಸಿರೆಂದು ಕೇಳಿಕೊಂಡ. ಅದಕ್ಕವರು ಒಪ್ಪಿ ಮ್ಯಾನೇಜರ್ ಬಳಿ ಮಾತಾಡುತ್ತೇನೆಂದು ಹೇಳಿ ಫೋನ್ ಕರೆಯನ್ನು ಕಟ್ ಮಾಡಿದರು. ನಂತರ ಅರ್ಧ ಗಂಟೆ ಬಿಟ್ಟ ನಂತರ ಕೆಲಸಕ್ಕೆ ಸಂದರ್ಶನಕ್ಕೆಂದು ಧಾರವಾಡಕ್ಕೆ ಹೋಗಬೇಕಂತೆ. ಆದರೆ ಅಲ್ಲಿಗೆ ಹೋಗುವಾಗ ನಿಮ್ಮ ಪದವಿಯ ಅಂಕಪಟ್ಟಿಗಳನ್ನು ತೆಗೆದುಕೊಂಡು ಹೋಗಬೇಕೆಂದು ಹೇಳಿದರು. ನನಗೆ ಈಗ ಪೀಕಲಾಟ ಶುರುವಾಯಿತು. ಏಕೆಂದರೆ ನಾನು ಆಗ ಪದವಿಯನ್ನು ಪೂರ್ತಿಸಿರಲಿಲ್ಲ. ಪಿಯುಸಿ ನಂತರ ಶಿಕ್ಷಕ ತರಬೇತಿ ಕೋರ್ಸ್ ಓದಿದ್ದೆ ಅಷ್ಟೇ. ಈ ವಿಷಯವನ್ನು ಆನಂದನ ಬಳಿ ಹೇಳಿದೆ. ಅವನು ಅದಕ್ಯಾಕೆ ಯೋಚಿಸುತ್ತೀರಿ ಸಾರ್? ಬೇರೆಯವರ ಪದವಿ ಅಂಕಪಟ್ಟಿಗೆ ಹೆಸರಿನ ಜಾಗದಲ್ಲಿ ವೈಟನರ್ ಹಚ್ಚಿ ನಿಮ್ಮ ಹೆಸರನ್ನು ಟೈಪಿಸಿ ನಂತರ ಜೆರಾಕ್ಸ್ ಮಾಡಿಸಿಕೊಡುತ್ತೇನೆ. ಅವರು ಕೇಳಿರುವುದು ಜೆರಾಕ್ಸ್ ತಾನೆ? ಒರಿಜಿನಲ್ ಏನಲ್ವಲ್ಲ? ಎಂದು ಹೇಳಿದ. ಅವನು ಅದೇ ರೀತಿ ಮಾಡಿ ಕೊಟ್ಟ!!

ಆದರೆ ಈಗ ಇನ್ನೊಂದು ಸಮಸ್ಯೆ ಶುರುವಾಯ್ತು. ನನಗೆ ಧಾರವಾಡಕ್ಕೆ ಹೋಗಲು ನನ್ನ ಬಳಿ ಹಣ ಹಾಗೂ ಹಾಕಿಕೊಂಡು ಹೋಗಲು ಶೂ ಮತ್ತು ಟೈ ಇರಲಿಲ್ಲ. ಇದನ್ನು ಆನಂದನೇ ವ್ಯವಸ್ಥೆ ಮಾಡಿದನು. ನಾನು ಅವನ ಶೂಗಳನ್ನ ತೆಗೆದುಕೊಂಡು ಬಂದೆ. ಆದರೆ ಆ ಶೂಗಳು ನನಗೆ ಆಗುತ್ತಿರಲಿಲ್ಲ. ತುಂಬಾ ಸಡಿಲವಾಗಿದ್ದವು. ನಾನು ಹಳೇ ಬಟ್ಟೆಗಳನ್ನು ತುಂಬಿ ನಡೆಯುವಾಗ ಹೇಗೋ ಕಾಲಿನಲ್ಲಿ ಬಿಗಿಯಾಗಿರುವಂತೆ ಮಾಡಿಕೊಂಡೆ. ಬಸ್ ಚಾರ್ಜ್‌ಗಿಂತ ರೈಲಿನಲ್ಲಿ ಹೋದರೆ ಕಮ್ಮಿ ಹಣ ಬೇಕಾಗಬಹುದೆಂದು ನಿರ್ಧರಿಸಿ ರೈಲಿನ ಸಮಯ ಕೇಳಿಕೊಂಡೆ. ಬೆಳಗಿನ ಜಾವ 5:30 ಕ್ಕೆ ರೈಲು ಇದೆಯೆಂದು ತಿಳಿದು. ವಿಪರ್ಯಾಸ ಅಂದರೆ ನನ್ನ ಬಳಿ ರೈಲಿನಲ್ಲೂ ಹೋಗಲಿಕ್ಕೆ ಹಣ ಇರಲಿಲ್ಲ. ಸರಿಸುಮಾರು 8:00 ಗಂಟೆಯ ವೇಳೆಯಲ್ಲಿ ನಮ್ಮ ಜೊತೆ ಸಹೋದ್ಯೋಗಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸುಮಂಗಲಾ ಮೇಡಂ ಮನೆಗೆ ಹೋಗಿ ಅವರ ಬಳಿ ಸಾಲ ಕೇಳಿದೆ. ಅದಕ್ಕವರು ಖುಷಿಯಿಂದಲೇ ಒಪ್ಪಿ ನನಗೆ 500 ರೂಪಾಯಿ ಕೊಟ್ಟರು. ನನಗೆ ತುಂಬಾ ಖುಷಿಯಾಗಿ ಬೆಳಗ್ಗೆ 4:45 ಗಂಟೆಗೆಲ್ಲಾ ಎದ್ದು ಧಾರವಾಡಕ್ಕೆ ಹೋಗೋಕೆ ರೆಡಿ ಆದೆ. ಇಷ್ಟು ಮುಂಚೆ ಏಳಲು ಕಾರಣವೂ ಇತ್ತು. ದಾವಣಗೆರೆಯ ವಿದ್ಯಾನಗರದಲ್ಲಿ ರೂಮ್ ಇದ್ದುದರಿಂದ ರೈಲ್ವೇ ನಿಲ್ದಾಣಕ್ಕೆ ಅಲ್ಲಿಂದ ಸುಮಾರು 3 ಕಿಮೀ ದೂರ ಹೋಗಬೇಕಾಗಿತ್ತು. ಆಟೋದಲ್ಲಿ ಹೋದರೆ ಹೆಚ್ಚಿನ ಹಣ ಕೇಳುತ್ತಾರೆಂದು ನಡೆದೇ ಹೋಗಲು ತೀರ್ಮಾನಿಸಿದೆ.

ನಿಲ್ದಾಣಕ್ಕೆ ನಡೆಯುವಾಗ ಆಗಾಗ್ಗೆ ಎದ್ದು ಬರುತ್ತಿದ್ದ ಶೂಗಳು ನನ್ನ ನಡಿಗೆಯ ವೇಗವನ್ನು ಕುಂಠಿತಗೊಳಿಸಿದ್ದವು. ನಾನು ತಡವಾಗುತ್ತದೆಯೆಂದು ಭಾವಿಸಿ ಶೂಗಳನ್ನು ಕೈಯಲ್ಲಿ ಹಿಡಿದು ರೈಲ್ವೇ ನಿಲ್ದಾಣ ಸಿಗುವವರೆಗೆ ಓಡಿದೆ. ನನ್ನ ಅದೃಷ್ಟಕ್ಕೆ ರೈಲು ಇನ್ನೂ ಹೋಗಿರಲಿಲ್ಲ. ಟಿಕೇಟ್ ತೆಗೆದುಕೊಂಡು ರೈಲನ್ನು ಹತ್ತಿ ಕುಳಿತೆ. ಇದೇ ಮೊದಲ ಬಾರಿಗೆ ನಾನು ಧಾರವಾಡಕ್ಕೆ ಹೋಗುತ್ತಿದ್ದೆ. ನನ್ನ ಎದುರಿಗೆ ಕುಳಿತಿದ್ದವರ ಬಳಿ ಹೇಗೆ ಹೋಗಬೇಕೆಂದು ಕೇಳಿದಾಗ ಅವರು ಮಾಹಿತಿ ತಿಳಿಸಿದರಲ್ಲದೇ ನನ್ನ ಬಗ್ಗೆ ಕನಿಕರ ತೋರಿ ನಿಮಗೆ ಕೆಲಸ ಸಿಗದಿದ್ದರೆ ನನಗೆ ಕರೆ ಮಾಡಿ ನಾನು ನಿಮಗೆ ಬೇರೊಂದು ಕೆಲಸ ಕೊಡಿಸುತ್ತೇನೆ ಎಂದು ಅವರ ನಂಬರ್ ಕೊಟ್ಟು ಹೋದರು.




ನಾನು ಹುಬ್ಬಳ್ಳಿಗೆ ಇಳಿದು ನಂತರ ಧಾರವಾಡಕ್ಕೆ ಹೋದೆ. ಆ ಕಂಪೆನಿಯ ಸೇಲ್ಸ್ ಆಫೀಸರ್ ನನಗೆ ಧಾರವಾಡದ ಕಾಲೇಜೊಂದರ ಬಳಿ ಹೋಗಲು ತಿಳಿಸಿದರು. ಬಹುಶಃ ಎಸ್‌ಡಿಎಂ ಕಾಲೇಜಿರಬೇಕು. ನಾನು ಅಲ್ಲಿಗೆ ಹೋದಾಗ ನನಗೆ ತುಂಬಾ ಮುಜುಗರವಾದಂತಾಯಿತು. ಏಕೆಂದರೆ ನಾನು ಶೂ ಟೈ ಧರಿಸಿ ಸೇಲ್ಸ್ ಮ್ಯಾನ್ ತರಹ ಕಾಣುತ್ತಿದ್ದೆ. ಅಲ್ಲಿನ ಹುಡುಗರು ನನ್ನನ್ನು ವಿಶೇಷವಾಗಿ ನೋಡಲು ಶುರು ಮಾಡಿದರು. ನಾನು ಸೀದಾ ಅಲ್ಲಿದ್ದ ಒಂದು ಮರದ ಬಳಿ ಕೆಳಗೆ ಕುಳಿತು ಆಫೀಸರ್‌ಗೆ ಕಾಯಲು ಶುರು ಮಾಡಿದೆ. ಅವರು ನನಗೆ 11 ಗಂಟೆಗೆ ಬರಲು ಹೇಳಿ ಅವರು ಬಂದಿದ್ದು ಮಾತ್ರ 12 ಗಂಟೆಗೆ. ನನಗೆ ಕಾದು ಕಾದು ಬೇಸರವೆನಿಸಿತ್ತು. ಬೇರೆ ಯಾರಾದ್ರೂ ಆಗಿದ್ದರೆ ಈ ಸಂದರ್ಶನವೂ ಬೇಡ ಕೆಲಸವೂ ಬೇಡ ಎಂದು ವಾಪಸ್ಸಾಗುತ್ತಿದ್ದರು. ಆದರೆ ನನಗೆ ಕೆಲಸ ಅನಿವಾರ್ಯವಾಗಿತ್ತಲ್ವ? ಅದಕ್ಕೆ ತಾಳ್ಮೆಯಿಂದ ಕಾದು ಕುಳಿತಿದ್ದೆ. ಅಂತೂ ಇಂತೂ ಅವರು 12 ಗಂಟೆಗೆ ಬಂದರು. ಅವರನ್ನು ಪರಿಚಯಿಸಿಕೊಂಡು ನನ್ನ ಬಗ್ಗೆ ವಿಚಾರಿಸಿದರು. ಅವರ ಹೆಸರು ದತ್ತಾತ್ರೇಯ ಅಂತಾ. ಫೋರ್ಟ್ಸ್ ಕಂಪೆನಿಯಲ್ಲಿ ರಿಜಿಯನಲ್ ಸೇಲ್ಸ್ ಮ್ಯಾನೇಜರ್ ಆಗಿದ್ದರು.

ಅವರದ್ದು ಮೂಲತಃ ಬೆಂಗಳೂರು. ನನಗೆ ಅವರು ಸಕ್ಕರೆ ಕಾಯಿಲೆಯ ಅವರದೇ ಕಂಪೆನಿಯ ಮಾತ್ರೆಯ ಬಗ್ಗೆ ಸವಿವರವಾಗಿ ಇರುವ ಒಂದು ಟಾನ್ ಹಾಳೆಯೊಂದನ್ನು ಕೊಟ್ಟು ಇದನ್ನು ನೀವು ನನಗೆ ಕಲಿತು ನೋಡದೇ ಹೇಳಬೇಕು. ನಿಮಗೆ 1 ಗಂಟೆ ಸಮಯ ಕೊಡುತ್ತೇನೆ ಎಂದು ಹೇಳಿ ಹೋದರು. ನನಗೆ ಅವರು ಕೊಟ್ಟ ಪ್ರೊಡಕ್ಟ್ ಹೆಸರ ಬೆನ್ನಿನ್ಯೂರಾನ್ ಫೋರ್ಟ್. ಇದು ಅವರದೇ ಕಂಪೆನಿಯ ಸಕ್ಕರೆ ಕಾಯಿಲೆಗೆ ಇರೋ ಮಾತ್ರೆ. ಇದನ್ನು ತೆಗೆದುಕೊಂಡರೆ ಇದು ನಮ್ಮ ದೇಹದಲ್ಲಿ ಯಾವ ರೀತಿಯಾಗಿ ಕಾರ್ಯನಿರ್ವಹಿಸುತ್ತೆ? ಎಂಬ ಬಗ್ಗೆ ಸಂಪೂರ್ಣ ವೈಜ್ಞಾನಿಕ ವಿವರವಿತ್ತು. ನೆನಪಿಟ್ಟುಕೊಳ್ಳಲು ಕಷ್ಟವಾಗುವಂತಹ ಪದಗಳ ಸಮೂಹವೇ ಅಲ್ಲಿತ್ತು. ನಾನು ಒಂದೆರಡು ಸಲ ಓದಿದೆ. ನನಗೆ ಯಾಕೋ ಕಷ್ಟವಾಗುತ್ತೆ. ಇದು ನನ್ನ ಕೈಲಿ ಸಾಧ್ಯವಿಲ್ಲ ಎಂದು ವಾಪಾಸ್ ಬರಲು ಮನದಲ್ಲಿ ಒಮ್ಮೆ ಆಲೋಚಿಸಿದೆ. ಆದರೆ ಮೊದಲೇ ಕೆಲಸ ಇಲ್ಲ, ವಾಪಾಸ್ ಹೋದರೆ ತೀರಿಸಬೇಕಾದ ಸಾಲ ಬೇರೆ. ಅಲ್ಲದೇ ಸರಿಕರ ಮುಂದೆ ಕೆಳಗೆ ಬಿದ್ದ ಅವಮಾನ ಎದುರಿಸಬೇಕೆಂದು ಕೂಡಲೇ ನನ್ನ ಮನಸ್ಥಿತಿ ಬದಲಾಯಿಸಿ ಮನಸ್ಸು ಮಾಡಿದರೆ ಯಾವುದೂ ಅಸಾಧ್ಯವಲ್ಲ ಎಂದು ನನ್ನಷ್ಟಕ್ಕೆ ನಾನೇ ನಿರ್ಧರಿಸಿ ಮತ್ತೆ ಹಠವಿಡಿದು ಓದುತ್ತಾ ಕುಳಿತೆ. ನನ್ನ ಅದೃಷ್ಟಕ್ಕೆ ಅದನ್ನು ನೋಡದೇ ಹೇಳಲು ಸಾಧ್ಯವಾಯಿತು. ಯಥಾ ಪ್ರಕಾರ ಒಂದಕ್ಷರವನ್ನೂ ಬಿಡದೇ ಹೇಳಿದ್ದಕ್ಕೆ ಅವರು ತುಂಬಾ ಖುಷಿಪಟ್ಟರು. ಅಲ್ಲದೇ ನನಗೆ ಕೆಲಸ ಕೊಡಲು ಒಪ್ಪಿದರು. ಸದ್ಯಕ್ಕೆ ನನ್ನ ಅಂಕಪಟ್ಟಿಗಳ ಬಗ್ಗೆ ಅವರು ವಿಚಾರಿಸಲೇ ಇಲ್ಲ!! ಆದರೆ ಅವರು ಕೊನೆಗೊಂದು ಹೇಳಿದ ಮಾತು ನನ್ನನ್ನು ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿಸಿತು. ನನ್ನನ್ನು ಚಿಂತೆಗೀಡು ಮಾಡುವಂತೆ ಮಾಡಿತು. ಕೆಲಸಕ್ಕೆ ನನ್ನ ಲೆವೆಲ್‌ನಲ್ಲಿ ನೀನು ಆಯ್ಕೆಯಾಗಿದ್ದೀಯ! ಎಂದು ಹೇಳಿದ್ದಾಗ ಉಬ್ಬಿದ್ದ ನನ್ನ ಮನದಾಳದ ಆಸೆಯ ಬಲೂನಿಗೆ ಅವರ ಈ ಮಾತಿಂದ ಉಬ್ಬಿದ ಬಲೂನಿಗೆ ಸೂಜಿ ಚುಚ್ಚಿದಂತಾಗಿತ್ತು!!

ಅಷ್ಟಕ್ಕೂ ಅವರು ಹೇಳಿದ ಮಾತೇನು? ನನಗೇಕೆ ಅದು ಚಿಂತೆಗೀಡು ಮಾಡುವಂತೆ ಮಾಡಿತು? ಕೆಲಸದ ಪಾಡು ಏನಾಯ್ತು? ಎಂಬುದನ್ನು ಮುಂದಿನ ಸಂಚಿಕೆಯಲ್ಲಿ ತಿಳಿಯೋಣ. ನಾವು ಅಂದಕೊಂಡಂತೆಲ್ಲ ನಡೆಯೋಹಾಗಿದ್ರೆ ಭೂಮಿ ಮ್ಯಾಗೆ ಯಾರ ಮಾತನ್ನೂ ಯಾರೂ ಕೇಳುತ್ತಿರಲಿಲ್ಲ, ಆ ವಿಧಿ ಆಗಾಗ ನಮ್ಮ ಜೀವನದಲ್ಲಿ ಕೆಲವೊಂದು ಅನಿರೀಕ್ಷಿತ ತಿರುವುಗಳನ್ನು ತಂದೊಡ್ಡುತ್ತದೆ. ಆ ತಿರುವಿನಲ್ಲಿ ಹುಷಾರಾಗಿ ಹೋಗಬೇಕು ಎಂದು ಕೆಲವರು ತಮ್ಮ ಮಾತಿನ ಮಧ್ಯೆ ಹೇಳುತ್ತಿರುತ್ತಾರೆ. ಇದನ್ನು ನಂಬುವುದು ಬಿಡುವುದು ಅವರವರಿಗೆ ಬಿಟ್ಟ ವಿಚಾರ

**- ಬಸವನಗೌಡ ಹೆಬ್ಬಳಗೆರೆ ಸರಣಿ**

---


> ಜೋಹಾನ್ಸ್ ಬರ್ಗ್ ನಗರವನ್ನು ಆಕಾಶದಿಂದ ನೋಡಿದರೆ ಅದೊಂದು ಕಾಡಿನಂತೆ ಕಾಣುತ್ತದೆ. ಆದರೆ ಒಂದು ಕಾಲದಲ್ಲಿ ಈ ಪ್ರದೇಶವು ಕೇವಲ ಬಂಜರು ಹುಲ್ಲುಗಾವಲಾಗಿತ್ತು (ಸವನ್ನಾ). ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಇಲ್ಲಿ ಬಂಗಾರದ ಗಣಿಗಾರಿಕೆ ಆರಂಭವಾದಾಗ, ಗಣಿಗಳ ಒಳಗೆ ಆಧಾರ ನೀಡಲು ಮರದ ದಿಮ್ಮಿಗಳ ಅವಶ್ಯಕತೆ ಇತ್ತು.

## ಜೋಹಾನ್ಸ್ ಬರ್ಗ್ ನಗರದ ಕುರಿತು

ಸಂಪಾದಕೀಯ ಸದ್ಯಶೋಧನೆ

ಎರಡು ದಿನಗಳಿಂದ ದಕ್ಷಿಣ ಆಫ್ರಿಕಾದ ಜೋಹಾನ್ಸ್ ಬರ್ಗ್ ನಗರದಲ್ಲಿ ಸುತ್ತುತ್ತಿದ್ದೇನೆ. ಈ ನಗರದ ಬಗ್ಗೆ ಕೆಲವು ಸ್ವಾರಸ್ಯ ಸಂಗತಿಗಳನ್ನು ಹೇಳಬಹುದು. ಇದು ದಕ್ಷಿಣ ಆಫ್ರಿಕಾದ ಅತಿದೊಡ್ಡ ನಗರ ಮತ್ತು ಆರ್ಥಿಕ ಹೃದಯಭಾಗ. ಇದನ್ನು ಸ್ಥಳೀಯರು ಪ್ರೀತಿಯಿಂದ ಜೋಬರ್ಗ್ ಅಥವಾ ಇಗೋಲಿ (ಬಂಗಾರದ ನಗರಿ) ಎಂದು ಕರೆಯುತ್ತಾರೆ. ಜೋಹಾನ್ಸ್ ಬರ್ಗ್ ನಗರವನ್ನು ಆಕಾಶದಿಂದ ನೋಡಿದರೆ ಅದೊಂದು ಕಾಡಿನಂತೆ ಕಾಣುತ್ತದೆ. ಆದರೆ ಒಂದು ಕಾಲದಲ್ಲಿ ಈ ಪ್ರದೇಶವು ಕೇವಲ ಬಂಜರು ಹುಲ್ಲುಗಾವಲಾಗಿತ್ತು (ಸವನ್ನಾ). ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಇಲ್ಲಿ ಬಂಗಾರದ ಗಣಿಗಾರಿಕೆ ಆರಂಭವಾದಾಗ, ಗಣಿಗಳ ಒಳಗೆ ಆಧಾರ ನೀಡಲು ಮರದ ದಿಮ್ಮಿಗಳ ಅವಶ್ಯಕತೆ ಇತ್ತು. ಇದಕ್ಕಾಗಿ ಸಾವಿರಾರು ಮರಗಳನ್ನು ನೆಡಲು ಪ್ರಾರಂಭಿಸಲಾಯಿತು. ಇಂದು ಈ ನಗರದಲ್ಲಿ ಸುಮಾರು 1 ಕೋಟಿಗಿಂತಲೂ ಹೆಚ್ಚು ಮರಗಳಿವೆ. ಇವುಗಳಲ್ಲಿ ಹೆಚ್ಚಿನವುಗಳನ್ನು ಮನುಷ್ಯರೇ ಹಂತಹಂತವಾಗಿ ನೆಟ್ಟಿದ್ದರಿಂದ ಇದನ್ನು ವಿಶ್ವದ ಅತಿದೊಡ್ಡ ಮಾನವ ನಿರ್ಮಿತ ಅರಣ್ಯ ಎಂದು ಕರೆಯಲಾಗುತ್ತದೆ. ಅಕ್ಟೋಬರ್ ತಿಂಗಳಿನಲ್ಲಿ ನಗರವು ನೇರಳೆ ಬಣ್ಣದ ಜಾಕರಂಡಾ ಹೂವುಗಳಿಂದ ಕಂಗೊಳಿಸುತ್ತದೆ. ಈ ಮರಗಳು ಮೂಲತಃ ದಕ್ಷಿಣ ಅಮೆರಿಕದ್ದಾಗಿದ್ದರೂ, ಇಂದು ಜೋಹಾನ್ಸ್ ಬರ್ಗ್‌ನ ಅಸ್ಮಿತೆಯಾಗಿವೆ. ಈ ಬೃಹತ್ ಹಸಿರು ಹೊದಿಕೆಯು ನಗರದ ಮಾಲಿನ್ಯವನ್ನು ತಡೆಗಟ್ಟುವುದಲ್ಲದೇ, ಇಲ್ಲಿನ ತಾಪಮಾನವನ್ನು ಸಮತೋಲನದಲ್ಲಿಡಲು ಸಹಕಾರಿಯಾಗಿದೆ. ಜಗತ್ತಿನ ಹೆಚ್ಚಿನ ಪ್ರಸಿದ್ಧ ನಗರಗಳನ್ನು ಗಮನಿಸಿ, ಲಂಡನ್ (ಥೇಮ್ಸ್ ನದಿ), ನ್ಯೂಯಾರ್ಕ್ (ಹಡ್ಸನ್ ನದಿ), ಮುಂಬೈ (ಅರಬ್ಬಿ ಸಮುದ್ರ) ಇವೆಲ್ಲವೂ ಜಲಮೂಲದ ಮೇಲೆ ಬೆಳೆದವುಗಳು. ಆದರೆ ಜೋಹಾನ್ಸ್ ಬರ್ಗ್ ಈ ಸಾಲಿಗೆ ಸೇರುವುದಿಲ್ಲ. ಈ ನಗರದ ಹತ್ತಿರ ಯಾವುದೇ ದೊಡ್ಡ ಸಮುದ್ರವಿಲ್ಲ, ಅಷ್ಟೇ ಏಕೆ, ನಗರದ ಮಧ್ಯೆ ಹರಿಯುವ ಒಂದು ದೊಡ್ಡ ನದಿಯೂ ಇಲ್ಲ, ಆದರೂ ಇದು ಜಗತ್ತಿನ ಪ್ರಮುಖ ಮೆಟ್ರೋಪಾಲಿಟನ್ ನಗರವಾಗಿ ಬೆಳೆದಿದ್ದು ಒಂದು ಪವಾಡವೇ ಸರಿ. ನೀರಿಲ್ಲದಿದ್ದರೂ ಇಲ್ಲಿ ಜನವಸತಿ ಹೆಚ್ಚಾಗಲು ಕಾರಣ ಚಿನ್ನ. 1886ರಲ್ಲಿ ಇಲ್ಲಿ ಚಿನ್ನದ ಅದಿರು ಪತ್ತೆಯಾದಾಗ, ಇಡೀ ಜಗತ್ತು ಇಲ್ಲಿಗೆ ಧಾವಿಸಿತು. ಸಮುದ್ರದ ದಾರಿ ಇಲ್ಲದಿದ್ದರೂ ಹಳಿಗಳನ್ನು ನಿರ್ಮಿಸಿ, ರಸ್ತೆಗಳನ್ನು ಮಾಡಿ ಈ ನಗರವನ್ನು ಕಟ್ಟಲಾಯಿತು. ಇದು ಮನುಷ್ಯನ ಹಠ ಮತ್ತು ಸಂಪತ್ತಿನ ವ್ಯಾಮೋಹವು ಭೌಗೋಳಿಕ ಮಿತಿಗಳನ್ನೂ ಹೇಗೆ ಮೀರಿಸಬಲ್ಲದು ಎಂಬುದಕ್ಕೆ ಸಾಕ್ಷಿ. ಜೋಹಾನ್ಸ್ ಬರ್ಗ್ ಸಮುದ್ರ ಮಟ್ಟದಿಂದ ಸುಮಾರು 1753 ಮೀಟರ್ ಎತ್ತರದಲ್ಲಿದೆ. ಇದು ಭಾರತದ ಪ್ರಸಿದ್ಧ ಗಿರಿಧಾಮವಾದ ಊಟಿಗಿಂತಲೂ ಎತ್ತರದಲ್ಲಿದೆ ಎಂದರೆ ಆಶ್ಚರ್ಯವಾಗಬಹುದು! ಎತ್ತರ ಹೆಚ್ಚಾದಂತೆ ಗಾಳಿಯಲ್ಲಿನ ಆಮ್ಲಜನಕದ ಸಾಂದ್ರತೆ ಕಡಿಮೆಯಾಗುತ್ತದೆ. ಇದು ಇಲ್ಲಿಗೆ ಬರುವ ಪ್ರವಾಸಿಗರಿಗೆ ಮತ್ತು ಕ್ರೀಡಾಪಟುಗಳಿಗೆ ತಕ್ಷಣವೇ ಅರಿವಾಗುತ್ತದೆ. ಇಲ್ಲಿ ಉಸಿರಾಟದಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರಬಹುದು. ಇಲ್ಲಿ ಕ್ರಿಕೆಟ್ ಅಥವಾ ಫುಟ್ಬಾಲ್ ಆಡುವಾಗ ಚೆಂಡು ಗಾಳಿಯಲ್ಲಿ ಅತಿ ವೇಗವಾಗಿ ಚಲಿಸುತ್ತದೆ ಮತ್ತು ಹೆಚ್ಚು ದೂರ ಹೋಗುತ್ತದೆ. ಅದಕ್ಕಾಗಿಯೇ ಜೋಹಾನ್ಸ್ ಬರ್ಗ್ ವಾಂಡರರ್ಸ್ ಮೈದಾನದಲ್ಲಿ ಸಿಕ್ಸರ್‌ಗಳ ಸುರಿಮಳೆಯಾಗುತ್ತದೆ. ಇಲ್ಲಿನ ಎತ್ತರದ ವಾತಾವರಣಕ್ಕೆ ಒಗ್ಗಿಕೊಳ್ಳುವುದು ಹೊರಗಿನಿಂದ ಬರುವ ಕ್ರೀಡಾಪಟುಗಳಿಗೆ ಒಂದು ಸವಾಲು. ಜೋಹಾನ್ಸ್ ಬರ್ಗ್‌ನ ಹವಾಮಾನವು ನಾಟಕೀಯ ಬದಲಾವಣೆಗಳಿಗೆ ಹೆಸರುವಾಸಿ. ಇಲ್ಲಿನ ಬೇಸಿಗೆಯ ಸಂಜೆಗಳು ಅದ್ಭುತ ಮತ್ತು ಭಯಾನಕ ಎರಡೂ ಹೌದು. ಇಲ್ಲಿ ವಿಶ್ವದ ಅತಿ ಹೆಚ್ಚು ಸಿಡಿಲುಗಳು ಬಡಿಯುತ್ತವೆ. ಬೇಸಿಗೆಯಲ್ಲಿ ಮಧ್ಯಾಹ್ನದವರೆಗೆ ಸುಡುವ ಬಿಸಿಲಿದ್ದರೆ, ಸಂಜೆಯಾಗುತ್ತಿದ್ದಂತೆ ದಿಢೀರನೆ ಕಪ್ಪು ಮೋಡಗಳು ಕವಿಯುತ್ತವೆ. ಆಗಿನ ಮಿಂಚು ಮತ್ತು ಗುಡುಗು ಎಷ್ಟು ಶಕ್ತಿಯುತವಾಗಿರುತ್ತದೆ ಎಂದರೆ, ಅದು ನಗರದ ವಿದ್ಯುತ್ ವ್ಯವಸ್ಥೆಯನ್ನೇ ಅಲುಗಾಡಿಸಬಹುದು. ಇಲ್ಲಿನ ಸಿಡಿಲುಗಳ ಬಗ್ಗೆ ಅಧ್ಯಯನ ನಡೆಸಲು ಜಗತ್ತಿನಾದ್ಯಂತ ವಿಜ್ಞಾನಿಗಳು ಬರುತ್ತಾರೆ. ಈ ಸಿಡಿಲುಗಳು ನಗರದ ಎತ್ತರದ ಕಟ್ಟಡಗಳ ಮೇಲೆ ಬೀಳುವ ದೃಶ್ಯ ಫೋಟೋಗ್ರಾಫರ್‌ಗಳಿಗೆ ಹಬ್ಬವನ್ನೇ ಉಂಟುಮಾಡುತ್ತದೆ. ಪ್ರತಿ ಚದರ ಕಿಲೋಮೀಟರ್‌ಗೆ ಇಲ್ಲಿ ಬೀಳುವ ಸಿಡಿಲುಗಳ ಸಂಖ್ಯೆ ಜಗತ್ತಿನ ಸರಾಸರಿಗಿಂತ ಬಹಳ ಹೆಚ್ಚು. ಬಂಜರು ಭೂಮಿಯನ್ನು ಕಾಡನ್ನಾಗಿ ಮಾಡಿದ್ದು, ಸಮುದ್ರವಿಲ್ಲದಿದ್ದರೂ ಆರ್ಥಿಕ ಕೇಂದ್ರವಾಗಿ ಬೆಳೆದದ್ದು ಮತ್ತು ಸಿಡಿಲು-ಗುಡುಗುಗಳ ನಡುವೆಯೂ ಎತ್ತರದ ಶಿಖರದಂತೆ ನಿಂತಿರುವುದು ಈ ನಗರದ ವೈಶಿಷ್ಟ್ಯ.

**- ವಿಶ್ವೇಶ್ವರ ಭಟ್**



# ಭಾವ ಲಹರಿ

## ಮನೋನೈರ್ಮಲ್ಯ

■ ಕಿಲುಬು ತೆಗೆಯದೆ ಇದ್ದರೆ ಭಗವಂತನೆಂದೆಂದಿಗೂ ಹೃನ್ಮಂಡಲಕ್ಕೆ ಬರಲಾರ. ಕುಳಿತುಕೊಳ್ಳುವ ಮುನ್ನ ನಾವು ಆಸನದ ಶುಚಿತ್ವವನ್ನು ಪರಿಶೀಲಿಸುತ್ತೇವೆ. ಆಸನವು ನೆಲವಿರಲಿ, ಕುರ್ಚಿಯಿರಲಿ, ಮಣೆಯಿರಲಿ, ಬಂಡೆ ಕಲ್ಲೇ ಆಗಿರಲಿ; ಸಣ್ಣ ಪುಟ್ಟ ಅಶುಚಿತ್ವವಿದ್ದರೆ ಶಲ್ಯವನ್ನೋ, ವರ್ತಮಾನಪತ್ರಿಕೆಯನ್ನೋ ಹಾಸಿ ಕುಳಿತುಕೊಳ್ಳುತ್ತೇವೆ.


**ಪ್ರಸಾದೇ ಸರ್ವದುಃಖಾನಾಮ್, ಹಾನಿರಸ್ಯೋಪಜಾಯತೇ**
**ಪ್ರಸನ್ನ ಚೇತಸೋ ಹ್ಯಾಶು, ಬುದ್ಧಿಃ ಪರ್ಯವತಿಷ್ಠತೇ**

ಅಂತಃಕರಣದಲ್ಲಿ ಪ್ರಸನ್ನತೆ ಅಥವಾ ನಿರ್ಮಲತೆಯನ್ನು ಪಡೆದವನ ಸಕಲ ದುಃಖಗಳೂ ನಾಶವಾಗುತ್ತವೆ. ಅವನ ಬುದ್ಧಿಯು ಬಹಳ ಬೇಗ ಭಗವಂತನಲ್ಲಿ ಸ್ಥಿರವಾಗುವುದು ಇದು ಶ್ಲೋಕಾರ್ಥ.

ಮನಸ್ಸು ಚಂಚಲ. ಅದರ ವೇಗ ಬೆಳಕಿಗಿಂತಲೂ ಅಧಿಕ. ಸದಾ ಅತ್ತಿತ್ತ ಓಡುತ್ತಿರುವ ಮನಸ್ಸುಗಳನ್ನು ಒಳ್ಳೆಯದರ ಕಡೆಗೂ ಕೆಡುಕಿನ ಕಡೆಗೂ ಸಾಗಿಸುತ್ತದೆ. ಹಠಮಾರಿ ಮನಸ್ಸು ಕೆಟ್ಟವುಗಳ ಕಡೆಗೆ ಸಾಗಿ ಅವುಗಳ ಬಲೆಯೊಳಗೆ ಸಿಲುಕಿದರೆ ಅದು ಮಲಿನವಾಗಿ ಭಗವಂತನಿಗೆ ಅಪ್ರಿಯವಾಗುತ್ತದೆ.

**ಸೌಮ್ಯಗುರುಕಾರ್ಲೆಯವರ ಮುಕ್ತಕವೊಂದು,**
**ಹಠಮಾರಿ ಮನಸನ್ನು ವಾಂಛೆಗಳ ಸುಳಿ ಸೆಳೆಯೆ**
**ತಟದೆಡೆಗೆ ತರುವಂತ ಯತ್ನವಂ ಮಾಡು**
**ಕಟುದಿಟವು ಕಹಿಯಲ್ಲ ಅಪರಿಮಿತ ಸುಖವಿಹುದು**
**ಸೆಟೆದು ನಿಲ್ಲುತ ಸೆಣಸು ಭಾವಲತೆಯೇ ಎಂದು ವಿವರಿಸುತ್ತದೆ.**

ಕೆಟ್ಟ ಸುಳಿಗಳತ್ತ ಧಾವಿಸಿ ದುಃಖಮಯವಾಗುವ ಮನಸನ್ನು ನಿಯಂತ್ರಣಕ್ಕೆ ತರುವಂತಹ ಪ್ರಯತ್ನವಾದರೆ ಅಪರಿಮಿತ ಸುಖಪ್ರಾಪ್ತಿಯಾಗುತ್ತದೆ. ಎಂಬುದು ಈ ಮುಕ್ತಕದ ತಿರುಳು. ದುಃಖ ಎಂದರೆ ಮನಸ್ಸಿಗೆ ತಗಲುವ ಕಿಲುಬು. ಕಿಲುಬು ತೆಗೆಯದೆ ಇದ್ದರೆ ಭಗವಂತನೆಂದೆಂದಿಗೂ ಹೃನ್ಮಂಡಲಕ್ಕೆ ಬರಲಾರ. ಕುಳಿತುಕೊಳ್ಳುವ ಮುನ್ನ ನಾವು ಆಸನದ ಶುಚಿತ್ವವನ್ನು ಪರಿಶೀಲಿಸುತ್ತೇವೆ. ಆಸನವು ನೆಲವಿರಲಿ, ಕುರ್ಚಿಯಿರಲಿ, ಮಣೆಯಿರಲಿ, ಬಂಡೆ ಕಲ್ಲೇ ಆಗಿರಲಿ; ಸಣ್ಣ ಪುಟ್ಟ ಅಶುಚಿತ್ವವಿದ್ದರೆ ಶಲ್ಯವನ್ನೋ, ವರ್ತಮಾನ ಪತ್ರಿಕೆಯನ್ನೋ ಹಾಸಿ ಕುಳಿತುಕೊಳ್ಳುತ್ತೇವೆ. ಹಿತಕರವಾಗದೇ ಇದ್ದರೆ ನಾವು ಆ ಜಾಗದಲ್ಲಿ ಕುಳಿತುಕೊಳ್ಳುವುದೇ ಇಲ್ಲ. ಶುಚಿತ್ವದ ಕಡೆಗೆ ನಶ್ವರ ದೇಹಿಗಳಾದ ನಾವೇ ಅಷ್ಟೊಂದು ಶ್ರದ್ಧೆ ವಹಿಸುವಾಗ ಅವಿನಾಶಿಯಾದ ಭಗವಂತನು ಕಿಲುಬು ಭರಿತವಾದ ನಮ್ಮ ಮನದಲ್ಲಿ ಪೀಠಸ್ಥನಾಗುವನೇ...?



ಬಾಹ್ಯವಾಗಿ ನಾವು ಶುಚಿರ್ಭೂತರು ಮತ್ತು ಸುಗಂಧಿತರಾಗಿ ಇದ್ದು ಅಂತರಂಗ ಕಲುಷಿತವಾಗಿದ್ದರೆ.? ಅಂತರಂಗದ ಕಿಲುಬಿಗೆ ಕಾರಣವಾಗುವ ಅಂಶಗಳು ಹಲವು. ತಾಮ್ರದ ಪಾತ್ರೆಗಳಿಗೆ ಕಿಲುಬು ಯಾಕೆ ಬರುತ್ತದೆಂಬುದು ನಮಗೆ ಗೊತ್ತು. ಪಾತ್ರೆಯನ್ನು ಬಳಸಬಹುದಾದ ರೀತಿಯಲ್ಲಿ ಬಳಸದಿರುವುದು ಎಂದರೆ ಅಡುಗೆ ಮಾಡುವಾಗ ನೀಡುವ ಅಧಿಕ ಶಾಖ, ಆಮ್ಲೀಯ ವಸ್ತುಗಳನ್ನು ತುಂಬಿಡುವುದು, ಉಪ್ಪಿನಂ ತಹ ಕ್ಷಾರೀಯ ವಸ್ತುಗಳನ್ನು ದಾಸ್ತಾನಿಡು ವುದು ಇವೆಲ್ಲ ಕಿಲುಬಿಗೆ ಕಾರಣವಾಗುತ್ತದೆ. ಈ ಕಿಲುಬನ್ನು ತೆಗೆದು ಶುಚಿಗೊಳಿಸಲು ಕಲಾವು ಬೇಕಾಗುತ್ತದೆ. ಮನಸ್ಸನ್ನೂ ನಾವು ಬಳಸಬೇಕಾದ ರೀತಿಯಲ್ಲಿ ನಿಯಂತ್ರಿತವಾಗಿ ಬಳಸದೇ ಇದ್ದಾಗ ಮನಸ್ಸಿಗೂ ಕಿಲುಬು ಹಿಡಿಯುವುದು ಸಹಜ. ಮನಸ್ಸಿನ ಕಿಲುಬನ್ನು ತೆಗೆದು ಶುಚಿಗೊಳಿಸಲು ದೇವರ ಧ್ಯಾನ, ಪೂಜೆ, ಆಧ್ಯಾತ್ಮಿಕ ಸತ್ಸಂಗಗಳಂತಹ ಕಲಾವು ಬೇಕೇ ಬೇಕು. ಮನಸಿನಲ್ಲಿರುವ ಕಶ್ಮಲ ಶೂನ್ಯವಾಗಬೇಕು. ಆ ಶೂನ್ಯದ ಬಲ ಪಕ್ಕದಲ್ಲಿ ದೇವರೆಂಬ ಬೃಹತ್ ಅಂಕೆ ನೆಲೆಯಾದಾಗ ಜೀವನವೂ ಮೌಲ್ಯಯುತವಾಗಿ ದುಃಖದ ಛಾಯೆ ಅಳಿಯುತ್ತದೆ.

ಮನಸ್ಸನ್ನು ಅಂಕೆಯಲ್ಲಿಡಬಲ್ಲವನು, ಎಂದರೆ ಅದನ್ನು ಸದಾ ನಿರ್ಮಲವಾಗಿರಿಸುವವನು ದುಃಖ ಮುಕ್ತನಾಗಿ ಭಗವಂತನ ಪ್ರಸನ್ನತೆಯೊಂದಿಗೆ ಸುಖಿಯಾಗಿರುತ್ತಾನೆ. ಎಂಬ ಸಂದೇಶವನ್ನು ಗೀತೆಯ ಈ ಶ್ಲೋಕವು ಸಾರುತ್ತದೆ.

**ಪ್ರಸಾದೇ ಸರ್ವದುಃಖಾನಾಮ್, ಹಾನಿರಸ್ಯೋಪಜಾಯತೇ**
**ಪ್ರಸನ್ನ ಚೇತಸೋ ಹ್ಯಾಶು, ಬುದ್ಧಿಃ ಪರ್ಯವತಿಷ್ಠತೇ**

ಅಂತಃಕರಣದಲ್ಲಿ ಪ್ರಸನ್ನತೆ ಅಥವಾ ನಿರ್ಮಲತೆಯನ್ನು ಪಡೆದವನ ಸಕಲ ದುಃಖಗಳೂ ನಾಶವಾಗುತ್ತವೆ. ಅವನ ಬುದ್ಧಿಯು ಬಹಳ ಬೇಗ ಭಗವಂತನಲ್ಲಿ ಸ್ಥಿರವಾಗುವುದು ಇದು ಶ್ಲೋಕಾರ್ಥ.

ಮನಸ್ಸು ಚಂಚಲ. ಅದರ ವೇಗ ಬೆಳಕಿಗಿಂತಲೂ ಅಧಿಕ. ಸದಾ ಅತ್ತಿತ್ತ ಓಡುತ್ತಿರುವ ಮನಸ್ಸುಗಳನ್ನು ಒಳ್ಳೆಯದರ ಕಡೆಗೂ ಕೆಡುಕಿನ ಕಡೆಗೂ ಸಾಗಿಸುತ್ತದೆ. ಹಠಮಾರಿ ಮನಸ್ಸು ಕೆಟ್ಟವುಗಳ ಕಡೆಗೆ ಸಾಗಿ ಅವುಗಳ ಬಲೆಯೊಳಗೆ ಸಿಲುಕಿದರೆ ಅದು ಮಲಿನವಾಗಿ ಭಗವಂತನಿಗೆ ಅಪ್ರಿಯವಾಗುತ್ತದೆ.

**ಸೌಮ್ಯಗುರುಕಾರ್ಲೆಯವರ ಮುಕ್ತಕವೊಂದು,**
**ಹಠಮಾರಿ ಮನಸನ್ನು ವಾಂಛೆಗಳ ಸುಳಿ ಸೆಳೆಯೆ**
**ತಟದೆಡೆಗೆ ತರುವಂತ ಯತ್ನವಂ ಮಾಡು**
**ಕಟುದಿಟವು ಕಹಿಯಲ್ಲ ಅಪರಿಮಿತ ಸುಖವಿಹುದು**
**ಸೆಟೆದು ನಿಲ್ಲುತ ಸೆಣಸು ಭಾವಲತೆಯೇ ಎಂದು ವಿವರಿಸುತ್ತದೆ.**

ಕೆಟ್ಟ ಸುಳಿಗಳತ್ತ ಧಾವಿಸಿ ದುಃಖಮಯವಾಗುವ ಮನಸನ್ನು ನಿಯಂತ್ರಣಕ್ಕೆ ತರುವಂತಹ ಪ್ರಯತ್ನವಾದರೆ ಅಪರಿಮಿತ ಸುಖಪ್ರಾಪ್ತಿಯಾಗುತ್ತದೆ. ಎಂಬುದು ಈ ಮುಕ್ತಕದ ತಿರುಳು.

ದುಃಖ ಎಂದರೆ ಮನಸ್ಸಿಗೆ ತಗಲುವ ಕಿಲುಬು. ಕಿಲುಬು ತೆಗೆಯದೆ ಇದ್ದರೆ ಭಗವಂತನೆಂದೆಂದಿಗೂ ಹೃನ್ಮಂಡಲಕ್ಕೆ ಬರ ಲಾರ. ಕುಳಿತುಕೊಳ್ಳುವ ಮುನ್ನ ನಾವು ಆಸನದ ಶುಚಿತ್ವವನ್ನು ಪರಿಶೀಲಿಸು ತ್ತೇವೆ. ಆಸನವು ನೆಲವಿರಲಿ, ಕುರ್ಚಿಯಿರಲಿ, ಮಣೆಯಿರಲಿ, ಬಂಡೆ ಕಲ್ಲೇ ಆಗಿರಲಿ; ಸಣ್ಣ ಪುಟ್ಟ ಅಶುಚಿತ್ವವಿದ್ದರೆ ಶಲ್ಯವನ್ನೋ, ವರ್ತಮಾನಪತ್ರಿಕೆಯನ್ನೋ ಹಾಸಿ ಕುಳಿತುಕೊಳ್ಳುತ್ತೇವೆ. ಹಿತಕರವಾಗದೇ ಇದ್ದರೆ ನಾವು ಆ ಜಾಗದಲ್ಲಿ ಕುಳಿತುಕೊಳ್ಳುವುದೇ ಇಲ್ಲ. ಶುಚಿತ್ವದ ಕಡೆಗೆ ನಶ್ವರ ದೇಹಿಗಳಾದ ನಾವೇ ಅಷ್ಟೊಂದು ಶ್ರದ್ಧೆ ವಹಿಸುವಾಗ ಅವಿನಾಶಿಯಾದ ಭಗವಂತನು ಕಿಲುಬು ಭರಿತವಾದ ನಮ್ಮ ಮನದಲ್ಲಿ ಪೀಠಸ್ಥನಾಗುವನೇ...?

ಬಾಹ್ಯವಾಗಿ ನಾವು ಶುಚಿರ್ಭೂತರು ಮತ್ತು ಸುಗಂಧಿತರಾಗಿ ಇದ್ದು ಅಂತರಂಗ ಕಲುಷಿತವಾಗಿದ್ದರೆ.? ಅಂತರಂಗದ ಕಿಲುಬಿಗೆ ಕಾರಣವಾಗುವ ಅಂಶಗಳು ಹಲವು. ತಾಮ್ರದ ಪಾತ್ರೆಗಳಿಗೆ ಕಿಲುಬು ಯಾಕೆ ಬರುತ್ತದೆಂಬುದು ನಮಗೆ ಗೊತ್ತು. ಪಾತ್ರೆಯನ್ನು ಬಳಸಬಹುದಾದ ರೀತಿಯಲ್ಲಿ ಬಳಸದಿರುವುದು ಎಂದರೆ ಅಡುಗೆ ಮಾಡುವಾಗ ನೀಡುವ ಅಧಿಕ ಶಾಖ, ಆಮ್ಲೀಯ ವಸ್ತುಗಳನ್ನು ತುಂಬಿಡುವುದು, ಉಪ್ಪಿನಂತಹ ಕ್ಷಾರೀಯ ವಸ್ತುಗಳನ್ನು ದಾಸ್ತಾನಿಡುವುದು ಇವೆಲ್ಲ ಕಿಲುಬಿಗೆ ಕಾರಣವಾಗುತ್ತದೆ. ಈ ಕಿಲುಬನ್ನು ತೆಗೆದು ಶುಚಿಗೊಳಿಸಲು ಕಲಾವು ಬೇಕಾಗುತ್ತದೆ. ಮನಸ್ಸನ್ನೂ ನಾವು ಬಳಸಬೇಕಾದ ರೀತಿಯಲ್ಲಿ ನಿಯಂತ್ರಿತವಾಗಿ ಬಳಸದೇ ಇದ್ದಾಗ ಮನಸ್ಸಿಗೂ ಕಿಲುಬು ಹಿಡಿಯುವುದು ಸಹಜ. ಮನಸ್ಸಿನ ಕಿಲುಬನ್ನು ತೆಗೆದು ಶುಚಿಗೊಳಿಸಲು ದೇವರ ಧ್ಯಾನ, ಪೂಜೆ, ಆಧ್ಯಾತ್ಮಿಕ ಸತ್ಸಂಗಗಳಂತಹ ಕಲಾವು ಬೇಕೇ ಬೇಕು. ಮನಸಿನಲ್ಲಿರುವ ಕಶ್ಮಲ ಶೂನ್ಯವಾಗಬೇಕು. ಆ ಶೂನ್ಯದ ಬಲ ಪಕ್ಕದಲ್ಲಿ ದೇವರೆಂಬ ಬೃಹತ್ ಅಂಕೆ ನೆಲೆಯಾದಾಗ ಜೀವನವೂ ಮೌಲ್ಯಯುತವಾಗಿ ದುಃಖದ ಛಾಯೆ ಅಳಿಯುತ್ತದೆ.

ಮನಸ್ಸನ್ನು ಅಂಕೆಯಲ್ಲಿಡಬಲ್ಲವನು, ಎಂದರೆ ಅದನ್ನು ಸದಾ ನಿರ್ಮಲವಾಗಿರಿಸುವವನು ದುಃಖ ಮುಕ್ತನಾಗಿ ಭಗವಂತನ ಪ್ರಸನ್ನತೆಯೊಂದಿಗೆ ಸುಖಿಯಾಗಿರುತ್ತಾನೆ. ಎಂಬ ಸಂದೇಶವನ್ನು ಗೀತೆಯ ಈ ಶ್ಲೋಕವು ಸಾರುತ್ತದೆ.

- **ರಮೇಶ ಎಂ. ಬಾಯಾರ್,** ಬಂಟ್ವಾಳ



## ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುವ ಸೂರ್ಯ ನಮಸ್ಕಾರ

ಒಂದೊಳ್ಳೆ ಮಾತು

ಬೆಳಗಿನ ಜಾವದ ತಂಪಾದ ಗಾಳಿ ಬೀಸುತ್ತಿದ್ದರೂ, ರಾಜೀವನ ಮನಸ್ಸಿನಲ್ಲಿ ಮಾತ್ರ ಬಿರುಗಾಳಿ ಎದ್ದಿತ್ತು. ಜೀವನದ ಸೋಲುಗಳು, ಕೆಲಸದ ಒತ್ತಡ ಮತ್ತು ಭವಿಷ್ಯದ ಚಿಂತೆಗಳು ಅವನನ್ನು ಕುಗ್ಗಿಸಿದ್ದವು. ಅಂದು ನಿದ್ದೆ ಬಾರದೆ ಮನೆಯ ತಾರಸಿಯ ಮೇಲೆ ಕುಳಿತು ಶೂನ್ಯವನ್ನೇ ನೋಡುತ್ತಿದ್ದ ರಾಜೀವನ ಕಣ್ಣುಗಳಲ್ಲಿ ಹತಾಶೆ ತುಂಬಿತ್ತು.

ಅವನ ತಾತ, ಸದಾ ಪ್ರಶಾಂತವಾಗಿರುವ ಹಿರಿಯ ಜೀವ, ರಾಜೀವನ ಭುಜದ ಮೇಲೆ ಮೆಲ್ಲನೆ ಕೈ ಇಟ್ಟರು. ರಾಜೀವ, ಕತ್ತಲೆ ಎಷ್ಟೇ ದಟ್ಟವಾಗಿದ್ದರೂ, ಸೂರ್ಯೋದಯವನ್ನು ತಡೆಯಲು ಅದಕ್ಕೆ ಸಾಧ್ಯವಿಲ್ಲ. ಬಾ, ಇಂದು ಆ ಸೂರ್ಯನ ಅಪ್ಪುಗೆಯಲ್ಲಿ ನಿನ್ನ ನೋವನ್ನು ಕರಗಿಸೋಣ, ಎಂದರು.

ತಾತ ಅವನನ್ನು ಪೂರ್ವ ದಿಕ್ಕಿಗೆ ನಿಲ್ಲಿಸಿ, ಸೂರ್ಯ ನಮಸ್ಕಾರದ ಸಂಸ್ಕಾರವನ್ನು ಅವನಿಗೆ ಧಾರೆ ಎರೆದರು. ರಾಜೀವ ಕೈಗಳನ್ನು ಜೋಡಿಸಿ ನಿಂತನು. ತಾತ ಹೇಳಿದರು, ರಾಜೀವ, ಮೊದಲ ಮಂತ್ರ ಓಂ ಮಿತ್ರಾಯ ನಮಃ. ಇದರರ್ಥ ಸೂರ್ಯ ಎಲ್ಲರಿಗೂ ಮಿತ್ರ. ನೀನು ಒಂಟಿಯಲ್ಲ, ಈ ಪ್ರಕೃತಿ ನಿನ್ನ ಜೊತೆಗಿದೆ ಎಂದು ಭಾವಿಸು. ರಾಜೀವನಿಗೆ ತಾನು ಏಕಾಂಗಿಯಲ್ಲ ಎಂಬ ಸಣ್ಣ ಧೈರ್ಯ ಮೂಡಿತು.

ಕೈಗಳನ್ನು ಮೇಲಕ್ಕೆತ್ತಿ ಹಿಂದಕ್ಕೆ ಬಾಗುವಾಗ (ಹಸ್ತೌತ್ತನಾಸನ), ಓಂ ರವಯೇ ನಮಃ ಎನ್ನುತ್ತಾ, ನಿನ್ನ ದುಃಖದ ಭಾರವನ್ನು ಇಳಿಸಿ, ರವಿಯಂತೆ ಪ್ರಕಾಶಿಸಲು ಸಿದ್ಧನಾಗು, ಎಂದರು. ರಾಜೀವ ಆಕಾಶದ ಕಡೆ ಮುಖ ಮಾಡಿದಾಗ, ಅವನ ಎದೆಯಲ್ಲಿದ್ದ ಭಾರ ಹಗುರಾದಂತೆ ಭಾಸವಾಯಿತು.

ಮುಂದಕ್ಕೆ ಬಾಗಿ ಪಾದಗಳನ್ನು ಮುಟ್ಟುವಾಗ (ಹಸ್ತಪಾದಾಸನ), ಓಂ ಸೂರ್ಯಾಯ ನಮಃ ಎಂದರು. ನಿನ್ನ ಸೋಲಿನ ಕತ್ತಲೆಯನ್ನು ಆ ಸೂರ್ಯನಿಗೆ ಒಪ್ಪಿಸಿಬಿಡು ರಾಜೀವ, ಅವನು ಕತ್ತಲೆ ನಿವಾರಕ, ಎಂದ ಮಾತು ರಾಜೀವನ ಮನ ಮುಟ್ಟಿತು. ಕಾಲನ್ನು ಹಿಂದಕ್ಕೆ ಚಾಚಿ ತಲೆ ಎತ್ತಿದಾಗ (ಅಶ್ವ ಸಂಚಲನಾಸನ), ಓಂ ಭಾನವೇ ನಮಃ ಎಂಬ ಮಂತ್ರ ಬಂತು. ನೋಡು ರಾಜೀವ, ಕತ್ತಲೆಯನ್ನು ಸರಿಸಿ ಬರುವ ಆ ಭಾನುವಿನ ತೇಜಸ್ಸು ನಿನ್ನಲ್ಲೂ ಇದೆ, ಎಂದರು ತಾತ.

ದಂಡಾಸನ ಮತ್ತು ಸಾಷ್ಟಾಂಗ ನಮಸ್ಕಾರ ಮಾಡುವಾಗ, ಓಂ ಖಗಾಯ ನಮಃ ಮತ್ತು ಓಂ ಪೂಷ್ಣೇ ನಮಃ ಎಂದು ಜಪಿಸಿದರು. ಭೂತಾಯಿ ನಿನ್ನನ್ನು ತಾಯಿಯಂತೆ ಪೋಷಿಸುತ್ತಿದ್ದಾಳೆ. ನೀನು ಬಲಹೀನನಲ್ಲ, ಈ ಸೃಷ್ಟಿಯ ಶಕ್ತಿ ನಿನ್ನ ಬೆನ್ನಿಗಿದೆ, ಎಂಬ ಮಾತುಗಳು ರಾಜೀವನ ಕಣ್ಣಲ್ಲಿ ನೀರು ಹೆಪ್ಪುಗಟ್ಟಿತ್ತು. ಅದು ದುಃಖದ ಹನಿಗಳಲ್ಲ, ಕೃತಜ್ಞತೆಯ ಕಣ್ಣೀರಾಗಿತ್ತು.

> " ದಂಡಾಸನ ಮತ್ತು ಸಾಷ್ಟಾಂಗ ನಮಸ್ಕಾರ ಮಾಡುವಾಗ, ಓಂ ಖಗಾಯ ನಮಃ ಮತ್ತು ಓಂ ಪೂಷ್ಣೇ ನಮಃ ಎಂದು ಜಪಿಸಿದರು. ಭೂತಾಯಿ ನಿನ್ನನ್ನು ತಾಯಿಯಂತೆ ಪೋಷಿಸುತ್ತಿದ್ದಾಳೆ. ನೀನು ಬಲಹೀನನಲ್ಲ, ಈ ಸೃಷ್ಟಿಯ ಶಕ್ತಿ ನಿನ್ನ ಬೆನ್ನಿಗಿದೆ, ಎಂಬ ಮಾತುಗಳು ರಾಜೀವನ ಕಣ್ಣಲ್ಲಿ ನೀರು ಹೆಪ್ಪುಗಟ್ಟಿತ್ತು. ಅದು ದುಃಖದ ಹನಿಗಳಲ್ಲ, ಕೃತಜ್ಞತೆಯ ಕಣ್ಣೀರಾಗಿತ್ತು.

ಹಾವಿನಂತೆ ಹೆಡೆ ಎತ್ತಿ (ಭುಜಂಗಾಸನ) ಓಂ ಹಿರಣ್ಯ ಗರ್ಭಾಯ ನಮಃ ಎಂದಾಗ, ತಾತ ಗಟ್ಟಿಯಾಗಿ ಹೇಳಿದರು, ರಾಜೀವ, ನಿನ್ನೊಳಗೆ ಒಂದು ಚಿನ್ನದಂತಹ ಸುಂದರ ಮನಸ್ಸಿದೆ. ಸೋಲುಗಳು ಅದನ್ನು ಮರೆಮಾಚಿರಬಹುದು, ಆದರೆ ನಾಶಮಾಡಲು ಸಾಧ್ಯವಿಲ್ಲ. ಈ ಮಾತು ರಾಜೀವನ ಎದೆಯಲ್ಲಿದ್ದ ನಡುಕವನ್ನು ನಿಲ್ಲಿಸಿ, ಆತ್ಮವಿಶ್ವಾಸವನ್ನು ತುಂಬಿತು.

ಮುಂದಿನ ಆಸನಗಳಲ್ಲಿ ಓಂ ಮರೀಚಯೇ ನಮಃ, ಓಂ ಆದಿತ್ಯಾಯ ನಮಃ, ಓಂ ಸವಿತ್ರೇ ನಮಃ ಮತ್ತು ಓಂ ಅರ್ಕಾಯ ನಮಃ ಎಂದು ಹೇಳುತ್ತಾ, ರಾಜೀವ ತನ್ನ ಅಸ್ತಿತ್ವವನ್ನು ಬ್ರಹ್ಮಾಂಡದ ಶಕ್ತಿಗೆ ಜೋಡಿಸಿದನು.

ಕೊನೆಯದಾಗಿ, ಮತ್ತೆ ನೇರವಾಗಿ ನಿಂತು (ತಾಡಾಸನ) ಓಂ ಭಾಸ್ಕರಾಯ ನಮಃ ಎಂದು ಕೈ ಮುಗಿದಾಗ, ದಿಗಂತದಲ್ಲಿ ಸೂರ್ಯ ಪೂರ್ತಿಯಾಗಿ ಮೂಡಿ ಬಂದಿದ್ದನು. ಬರೀ ಆಗಸದಲ್ಲಿ ಮಾತ್ರವಲ್ಲ, ರಾಜೀವನ ಮನಸ್ಸಿನಲ್ಲೂ ಸೂರ್ಯೋದಯವಾಗಿತ್ತು. ರಾಜೀವ ದೀರ್ಘವಾಗಿ ಉಸಿರು ಬಿಟ್ಟನು. ಅವನ ಕೆನ್ನೆಯ ಮೇಲೆ ಹರಿಯುತ್ತಿದ್ದ ಆನಂದ ಭಾಷ್ಪ ಬೆಳಗಿನಜಾವದ ಸೂರ್ಯನ ಕಿರಣಗಳು ತಾಗಿ ಮಿನುಗುತ್ತಿತ್ತು. ಅವನು ತಾತನ ಪಾದ ಮುಟ್ಟಿ, ತಾತ, ಇಷ್ಟು ದಿನ ನಾನು ಕತ್ತಲನ್ನೇ ನೋಡುತ್ತಿದ್ದೆ, ಇಂದು ನನ್ನೊಳಗಿನ ಬೆಳಕನ್ನು ತೋರಿಸಿದಿರಿ, ಎಂದನು.

ಪ್ರತಿ ಬಾರಿ ಬಿದ್ದಾಗಲೂ, ಸೂರ್ಯನಂತೆ ಮತ್ತೆ ಏಳಬಹುದು ಎಂಬ ಸತ್ಯವನ್ನು ರಾಜೀವ ಕಂಡುಕೊಂಡನು. ಭಾರತೀಯ ಸನಾತನ ಧರ್ಮದಿಂದ, ಪದ್ಧತಿಗಳಿಂದ ನಮಗೆ ಸಿಕ್ಕ ಯೋಗ, ಸೂರ್ಯ ನಮಸ್ಕಾರ ಮುಂತಾದ ಸಂಸ್ಕಾರಗಳು ಬರೀ ದೈಹಿಕವಾಗಿ ಅಲ್ಲ ಮಾನಸಿಕವಾಗಿ ಅದಕ್ಕೂ ಮಿಗಿಲಾಗಿ ಸರ್ವತೋಮುಖವಾಗಿ ನಮ್ಮ ಮನುಷ್ಯ ಜನ್ಮವನ್ನು ಔನ್ನತ್ಯಕ್ಕೆ ಕರೆದೊಯ್ಯುವ ಸಾಮರ್ಥ್ಯವಿರುವ ಹಿರಿಯರ ಆಶೀರ್ವಾದ ರೂಪದ ವರಗಳು.

- **ರೂಪಾ** ಗುರುರಾಜ್

## ಒಲಿವರ್ ಟ್ಯಾಂಬೋ ನೆನಪು

> " ಒಲಿವರ್ ಟ್ಯಾಂಬೋ ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯ ವಿರುದ್ಧ ನಡೆದ ಹೋರಾಟದ ಅತಿದೊಡ್ಡ ಶಕ್ತಿ. ದಕ್ಷಿಣ ಆಫ್ರಿಕಾದ ಇತಿಹಾಸದಲ್ಲಿ ನೆಲ್ಸನ್ ಮಂಡೇಲಾರ ಹೆಸರು ಎಷ್ಟು ಪ್ರಸಿದ್ಧವೋ, ಅಷ್ಟೇ ಪ್ರಮುಖವಾದದ್ದು ಒಲಿವರ್ ಟ್ಯಾಂಬೋ ಹೆಸರು. ಮಂಡೇಲಾ ಜೈಲಿನಲ್ಲಿದ್ದಾಗ, ಇಡೀ ಜಗತ್ತಿನ ಗಮನವನ್ನು ದಕ್ಷಿಣ ಆಫ್ರಿಕಾದತ್ತ ಸೆಳೆದು, ಹೊರಗಿನಿಂದ ಹೋರಾಟವನ್ನು ಜೀವಂತವಾಗಿರಿಸಿದವರು ಟ್ಯಾಂಬೋ.

ಸಂಪಾದಕರ ಸದ್ಯಶೋಧನೆ

ದಕ್ಷಿಣ ಆಫ್ರಿಕಾದ ಜೋಹಾನ್ಸ್ ಬರ್ಗ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕಾಲಿಡುತ್ತಿದ್ದಂತೆ ಒಲಿವರ್ ಟ್ಯಾಂಬೋ ಹೆಸರು ಮತ್ತು ಕಂಚಿನ ಪುತ್ಥಳಿ ಗೋಚರಿಸುತ್ತದೆ. ಈ ಹೆಸರನ್ನು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಯಾಕೆ ಇಟ್ಟಿದ್ದಾರೆ ಎಂಬ ಕುತೂಹಲ ಬರಬಹುದು.

ಒಲಿವರ್ ಟ್ಯಾಂಬೋ ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯ ವಿರುದ್ಧ ನಡೆದ ಹೋರಾಟದ ಅತಿದೊಡ್ಡ ಶಕ್ತಿ. ದಕ್ಷಿಣ ಆಫ್ರಿಕಾದ ಇತಿಹಾಸದಲ್ಲಿ ನೆಲ್ಸನ್ ಮಂಡೇಲಾರ ಹೆಸರು ಎಷ್ಟು ಪ್ರಸಿದ್ಧವೋ, ಅಷ್ಟೇ ಪ್ರಮುಖವಾದದ್ದು ಒಲಿವರ್ ಟ್ಯಾಂಬೋ ಹೆಸರು. ಮಂಡೇಲಾ ಜೈಲಿನಲ್ಲಿದ್ದಾಗ, ಇಡೀ ಜಗತ್ತಿನ ಗಮನವನ್ನು ದಕ್ಷಿಣ ಆಫ್ರಿಕಾದತ್ತ ಸೆಳೆದು, ಹೊರಗಿನಿಂದ ಹೋರಾಟವನ್ನು ಜೀವಂತವಾಗಿರಿಸಿದವರು ಟ್ಯಾಂಬೋ. ಒಲಿವರ್ ಟ್ಯಾಂಬೋ ಮತ್ತು ನೆಲ್ಸನ್ ಮಂಡೇಲಾರ ಗೆಳೆತನ ಒಂದು ಇತಿಹಾಸ.

ಇವರಿಬ್ಬರೂ ಸೇರಿ 1952ರಲ್ಲಿ ದಕ್ಷಿಣ ಆಫ್ರಿಕಾದ ಮೊಟ್ಟಮೊದಲ ಬಾರಿಗೆ ಕಪ್ಪು ವರ್ಣೀಯರಿಗಾಗಿ ಮಂಡೇಲಾ ಅಂಡ್ ಟ್ಯಾಂಬೋ ಎಂಬ ಕಾನೂನು ಸಂಸ್ಥೆಯನ್ನು ಪ್ರಾರಂಭಿಸಿದರು. ವರ್ಣಭೇದ ನೀತಿಯಿಂದ ತುಳಿತಕ್ಕೊಳಗಾದ ಕಪ್ಪು ವರ್ಣೀಯರಿಗೆ ನ್ಯಾಯ ಕೊಡಿಸುವುದು ಇವರ ಮುಖ್ಯ ಉದ್ದೇಶವಾಗಿತ್ತು.

ಮಂಡೇಲಾ ಆಕ್ರಮಣಕಾರಿ ನಾಯಕನಾಗಿದ್ದರೆ, ಟ್ಯಾಂಬೋ ಅವರು ಶಾಂತಚಿಂತಕ ಮತ್ತು ರಾಜತಾಂತ್ರಿಕ ಗುಣವುಳ್ಳವರಾಗಿದ್ದರು. 1960ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಪಕ್ಷವನ್ನು ನಿಷೇಧಿಸಿದಾಗ, ಪಕ್ಷದ ಅಸ್ತಿತ್ವವನ್ನು ಉಳಿಸಲು ಟ್ಯಾಂಬೋ ಅವರಿಗೆ ದೇಶ ಬಿಟ್ಟು ಹೋಗಲು ಸೂಚಿಸಲಾಯಿತು. ಅವರು ಮುಂದಿನ 30 ವರ್ಷಗಳ ಕಾಲ ತಮ್ಮ ದೇಶದಿಂದ ದೂರವಿದ್ದು, ಲಂಡನ್ ಮತ್ತು ಇತರ ದೇಶಗಳಲ್ಲಿ ನೆಲೆಸಿದರು.

ತನ್ನ ದೇಶದ ಜನರ ಹಕ್ಕುಗಳಿಗಾಗಿ ಹೋರಾಡಲು ಒಬ್ಬ ಮನುಷ್ಯ ತನ್ನ ಮನೆಯಿಂದ, ಮಣ್ಣಿನಿಂದ 30 ವರ್ಷಗಳ ಕಾಲ ದೂರವಿರುವುದು ಸುಲಭದ ಮಾತಲ್ಲ. ಆದರೆ ಟ್ಯಾಂಬೋ ಅವರು ಈ ಕಾಲಾವಧಿಯಲ್ಲಿ ಜಗತ್ತಿನಾದ್ಯಂತ ಸಂಚರಿಸಿ, ವರ್ಣಭೇದ ನೀತಿಯ ವಿರುದ್ಧ ಅಂತಾರಾಷ್ಟ್ರೀಯ ಬೆಂಬಲವನ್ನು ಕ್ರೋಢೀಕರಿಸಿದರು.

ನೆಲ್ಸನ್ ಮಂಡೇಲಾ ಸೇರಿದಂತೆ ಪ್ರಮುಖ ನಾಯಕರು ಜೈಲಿನಲ್ಲಿದ್ದಾಗ, ಎಎನ್‌ಸಿ ಪಕ್ಷವು ದಿಕ್ಕಿಲ್ಲದಂತಾಗಿತ್ತು. ಅಂಥ ಸಮಯದಲ್ಲಿ ಟ್ಯಾಂಬೋ ಪಕ್ಷದ ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡರು. ಚದುರಿಹೋಗಿದ್ದ ಹೋರಾಟಗಾರರನ್ನು ಒಂದುಗೂಡಿಸಿ, ವರ್ಣಭೇದ ನೀತಿಯು ಕೇವಲ ದಕ್ಷಿಣ ಆಫ್ರಿಕಾದ ಸಮಸ್ಯೆಯಲ್ಲ, ಅದು ಇಡೀ ಮಾನವೀಯತೆಯ ವಿರುದ್ಧದ ಅಪರಾಧ ಎಂದು ಜಗತ್ತಿಗೆ ಮನವರಿಕೆ ಮಾಡಿಕೊಟ್ಟರು.


ಒಲಿವರ್ ಟ್ಯಾಂಬೋ ಅವರ ಮೇಲೆ ಮಹಾತ್ಮ ಗಾಂಧಿಯವರ ತತ್ವಗಳ ಪ್ರಭಾವ ಬಹಳವಿತ್ತು. ಅವರು ಮೂಲತಃ ಗಣಿತ ಶಿಕ್ಷಕರಾಗಿದ್ದರು. ಅವರ ಮಾತುಗಳಲ್ಲಿ ಸೌಮ್ಯತೆಯಿತ್ತು, ಆದರೆ ಅವರ ನಿರ್ಧಾರಗಳಲ್ಲಿ ವಜ್ರದಂಥ ಕಾಠಿಣ್ಯವಿತ್ತು. ಅನ್ಯಾಯದ ವಿರುದ್ಧ ಹೋರಾಡುವಾಗಲೂ ಅವರು ಘನತೆಯನ್ನು ಬಿಟ್ಟುಕೊಡಲಿಲ್ಲ.

ಟ್ಯಾಂಬೋ ಅವರಿಗೆ ಸಂಗೀತ ಎಂದರೆ ಬಹಳ ಇಷ್ಟ. ಅವರು ಲಂಡನ್‌ನಲ್ಲಿದ್ದಾಗ ಚರ್ಚ್ ಹಾಡುಗಳನ್ನು ಹಾಡುವುದರಲ್ಲಿ ಪಾಲ್ಗೊಳ್ಳುತ್ತಿದ್ದರು. ಅವರ ಸೌಮ್ಯ ಸ್ವಭಾವಕ್ಕೆ ಸಂಗೀತವೇ ಸ್ಫೂರ್ತಿಯಾಗಿತ್ತು. ಮಂಡೇಲಾ ಅವರು ಜೈಲಿನಿಂದ ಬಿಡುಗಡೆಯಾದಾಗ ಮೊದಲು ನೆನೆದದ್ದು ಟ್ಯಾಂಬೋ ಅವರನ್ನು. ನಾನು ಜೈಲಿನಲ್ಲಿದ್ದರೂ ಹೊರಗಿನ ಜಗತ್ತಿಗೆ ನನ್ನ ಧ್ವನಿ ಕೇಳಿಸುವಂತೆ ಮಾಡಿದವರು ಒಲಿವರ್ ಎಂದು ಮಂಡೇಲಾ ಹೇಳಿದ್ದರು.

ಅವರು ದಕ್ಷಿಣ ಆಫ್ರಿಕಾಕ್ಕೆ ಮರಳಿದಾಗ, ಅವರಿಗೆ ಪಾರ್ಶ್ವವಾಯು ಪೀಡಿಸಿತ್ತು. ಆದರೂ ಅವರು ದೇಶದ ಮೊದಲ ಪ್ರಜಾಪ್ರಭುತ್ವ ಚುನಾವಣೆಯನ್ನು ನೋಡಲು ಬದುಕಿದ್ದರು. ಜೋಹಾನೆಸ್ಬರ್ಗ್ ವಿಮಾನ ನಿಲ್ದಾಣಕ್ಕೆ ಮೊದಲು ಜಾನ್ ಸ್ಮಟ್ಸ್ ಮತ್ತು ನಂತರ ಜೋಹಾನ್ಸ್ ಬರ್ಗ್ ಇಂಟರ್ ನ್ಯಾಷನಲ್ ಎಂಬ ಹೆಸರಿತ್ತು. ಆದರೆ 2006ರಲ್ಲಿ ಇದಕ್ಕೆ .. ಎಂದು ಮರುನಾಮಕರಣ ಮಾಡಲಾಯಿತು.

ಈ ವಿಮಾನ ನಿಲ್ದಾಣವು ದಕ್ಷಿಣ ಆಫ್ರಿಕಾಕ್ಕೆ ಜಗತ್ತಿನ ಇತರ ದೇಶಗಳನ್ನು ಜೋಡಿಸುವ ಕೊಂಡಿಯಾಗಿದೆ. ಒಲಿವರ್ ಟ್ಯಾಂಬೋ ಅವರು ಕೂಡ ದೇಶಭ್ರಷ್ಟರಾಗಿದ್ದ ಕಾಲದಲ್ಲಿ ಜಗತ್ತನ್ನು ಸುತ್ತಿ ದಕ್ಷಿಣ ಆಫ್ರಿಕಾವನ್ನು ಅಂತಾರಾಷ್ಟ್ರೀಯ ಸಮುದಾಯಕ್ಕೆ ಜೋಡಿಸಿದ್ದರು. ಆ ನೆನಪಿಗಾಗಿ ಈ ವಿಮಾನ ನಿಲ್ದಾಣಕ್ಕೆ ಅವರ ಹೆಸರಿಡಲಾಗಿದೆ.

ಒಲಿವರ್ ಟ್ಯಾಂಬೋ ಅವರು ಹೇಳುತ್ತಿದ್ದರು- ಒಬ್ಬ ನಾಯಕನ ಕೆಲಸವೆಂದರೆ ಜನರಿಗೆ ಅವರು ಏನು ಬಯಸುತ್ತಾರೆ ಎಂಬುದನ್ನು ಹೇಳುವುದಲ್ಲ, ಬದಲಿಗೆ ಅವರಿಗೆ ಯಾವುದು ಒಳ್ಳೆಯದು ಎಂಬುದನ್ನು ಮನವರಿಕೆ ಮಾಡಿಕೊಡುವುದು. ಅವರ ಜೀವನವು ಶಿಸ್ತು, ಸಂಯಮ ಮತ್ತು ಅವಿರತ ಹೋರಾಟಕ್ಕೆ ಮಾದರಿ.




## ಕನ್ನಡ ಕವನಗಳು

### ನಿರ್ಮಲ ಹೃದಯದಿ ನೀ, ರಾಣಿಯಂತೆ ತಿಳಿಯು

- **ಹಾ ಮ ಸತೀಶ** ಬೆಂಗಳೂರು

ಗೆಳತೀ, ಸುಂದರವಾಗಿ ಇರುವ, ನೀ, ರಾಣಿಯಂತೆ ತಿಳಿಯು
ತಾರೆಯಂತೆ ತಿಳಿಯು
ಗೆಳತೀ, ಮಧುರವಾದ ಸುಧೆಯಾ,
ಸವಿಯಂತೆ ತಿಳಿಯು
ಹೊತ್ತಿಲ್ಲದೆ ಬಂದರಿಂದೂ,
ಬಾಯಿ ತುಂಬ ನಕ್ಕೆಯಲ್ಲೇ
ಗೆಳತೀ, ಚೆಲುವ ಸನಿಹವೂ,
ಸುವಾಸನೆಯಂತೆ ತಿಳಿಯು
ಗೊತ್ತು ಗುರಿಯಿಲ್ಲದ
ಬದುಕು, ಸಂತೆಯೆಂದೆ
ಅಲ್ಲವೇ
ಗೆಳತೀ, ಮತ್ತಿನಾ
ಮುತ್ತಿನ, ಮದಿರೆಯಂತೆ
ತಿಳಿಯು
ಚಿತ್ತಾರದ ಪುಟಗಳ
ಬಾಳೂ, ಕನಸೆಂದೆಯೇ
ಯಾಕೆ
ಗೆಳತೀ, ನಶೆ ಕೂಡ
ಒಂದೊಳ್ಳೆ, ನಡತೆಯಂತೆ
ತಿಳಿಯು
ಮುತ್ತು ತಂದು
ಎದುರಿಟ್ಟರೂ, ನೀ ಕಾಡಲಿಲ್ಲ ಏಕೆ
ಗೆಳತೀ, ನಿರ್ಮಲ ಹೃದಯದಿ




## ಪ್ರಗತಿಪರರಿಗೂ ಪ್ರೇರಣೆ ಸ್ವಾತಂತ್ರ್ಯವೀರ ಸಾವರ್ಕರ್

ವಿನಾಯಕ ದಾಮೋದರ ಸಾವರ್ಕರರು ಸ್ವಾತಂತ್ರ್ಯವೀರ ಎಂಬ ಮಹಾನ್ ಗೌರವದಿಂದ ಭಾರತೀಯರ ಹೃದಯದಲ್ಲಿ ನೆಲೆಸಿರೆ. ಅವರು ಉಗ್ರ ಹಿಂದುತ್ವದ ಪ್ರತಿಪಾದಕರಾಗಿದ್ದರು ಎಂದು ಹೆಸರಾಗಿದ್ದಾರೆ. ಆದರೆ ಅವರು ಹಿಂದೂ ಧರ್ಮದಲ್ಲಿಯ ಅಸ್ಪೃಶ್ಯತೆಯ ಆಚರಣೆ ಹಾಗೂ ಅಂಧಶ್ರದ್ಧೆಗಳ ಕಡು ವಿರೋಧಿಯಾಗಿದ್ದರು ಎಂಬುದು ಹೆಚ್ಚು ಮುನ್ನೆಲೆಗೆ ಬಂದಿಲ್ಲ ಎಂಬುದು ನೋವಿನ ಸಂಗತಿ.

ಅವರ ವಿಶಾಲ ಮತ್ತು ವೈವಿಧ್ಯಮಯ ಚಿಂತನೆಗಳನ್ನು ಪರಿಚಯಿಸುವ ಕೆಲಸ ವ್ಯಾಪಕವಾಗಿ ನಡೆಯುವುದು ಬಹಳ ಅವಶ್ಯವಿದೆ. ಅವರ ಅರವತ್ತನೆಯ ಸ್ಮರಣೆ ದಿನ ಫೆಬ್ರವರಿ 26ರಂದು (ಮೇ 28, 1993– 26 ಫೆಬ್ರವರಿ 1966) ದೇಶದ ತುಂಬಾ ನಡೆಯಲಿದೆ.

ಮಠ, ಮಂದಿರ, ಧಾರ್ಮಿಕ ಸ್ಥಳಗಳು ಎಲ್ಲರ ಪ್ರವೇಶಕ್ಕೆ ಮುಕ್ತವಾಗಿರಬೇಕು. ಅಸ್ಪೃಶ್ಯತೆ ಆಚರಣೆ ಹಿಂದೂ ಧರ್ಮಕ್ಕೆ ಅಂಟಿರುವ ಕಳಂಕ ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಮೇಲ್ಜಾತಿಯವರು ತಳ ಸಮುದಾಯದವರಿಗೆ ಮಂದಿರಗಳ ಪ್ರವೇಶ ನಿರಾಕರಿಸುತ್ತಿದ್ದರು. ಇದು ಸಾವರ್ಕರ್‌ಗೆ ನೋವನ್ನುಂಟು ಮಾಡಿತ್ತು. ಅವರು ಇದಕ್ಕೆ ಪರ್ಯಾಯವಾಗಿ ಎಲ್ಲರಿಗೂ ಪ್ರವೇಶವಿರುವ ಪತಿತ ಪಾವನ ಮಂದಿರವನ್ನು ಮಹಾರಾಷ್ಟ್ರದ ರತ್ನಗಿರಿಯಲ್ಲಿ 1931ರಷ್ಟು ಹಿಂದೆಯೇ ನಿರ್ಮಿಸಿದ್ದಾರೆ.

ಇದು ಅವರ ವೈಚಾರಿಕ ನಿಲುವಿಗೆ ಗಟ್ಟಿ ಸಾಕ್ಷಿಯಾಗಿ ನಿಂತಿದೆ. ಇದರ ವಾಸ್ತುಶಿಲ್ಪ ಸರಳವಾಗಿದ್ದು, ಯಾವುದೇ ಆಡಂಬರವಿಲ್ಲದೆ ಸಾಮಾಜಿಕ ಅಸಮಾನತೆಗಳ ವಿರುದ್ಧದ ನಿಲುವನ್ನು ಸಂಕೇತಿಸುವಂತೆ ರಚಿಸಲಾಗಿದೆ. ಈ ಮಂದಿರಕ್ಕೆ ಬೇರೆ ಬೇರೆ ತಳ ಸಮುದಾಯಕ್ಕೆ ಸೇರಿದ ಯುವಕರನ್ನು ಅರ್ಚಕರನ್ನಾಗಿ ಅವರು ನೇಮಿಸಿದ್ದರು.



ಈಗಲೂ ಆ ವಿಧಾನ ಮುಂದುವರೆದಿದೆ. ಮಂದಿರದ ವಿಶಾಲ ಆವರಣದಲ್ಲಿ ಸಾವರ್ಕರ್ ಅವರ ಸ್ವಾತಂತ್ರ್ಯ ಹೋರಾಟದ ಮ್ಯೂಸಿಯಂ ಕೂಡ ನಿರ್ಮಿಸಲಾಗಿದೆ. ಮಂದಿರದಲ್ಲಿಯೇ ರೋಟಿ ಬಂದಿ ಸಹ ಭೋಜನ ಕಾರ್ಯಕ್ರಮವನ್ನು ಅವರು ಆರಂಭಿಸಿದರು. ಪ್ರಥಮ ಸಹಭೋಜನ ಮಹಿಳೆಯರಿಗಾಗಿ ಏರ್ಪಡಿಸಿದ್ದು ವಿಶೇಷವಾಗಿತ್ತು. ಈ ಕಾರ್ಯಕ್ರಮದಲ್ಲಿ ವಿವಿಧ ಸಮಾಜದ 75 ಮಹಿಳೆಯರು ಪಾಲ್ಗೊಂಡಿದ್ದು ಆಗ ದೊಡ್ಡ ಸಂಚಲನವನ್ನುಂಟು ಮಾಡಿತ್ತು. ಮಹಾರಾಷ್ಟ್ರದಲ್ಲಿ ಗಣಪತಿ ಉತ್ಸವ ತುಂಬಾ ಪ್ರಸಿದ್ಧ. ಸ್ವಾತಂತ್ರ್ಯ ಸಂಗ್ರಾಮದ ಭಾಗವಾಗಿ ಲೋಕಮಾನ್ಯ ತಿಲಕರು ಇದನ್ನು ಆರಂಭಿಸಿದ್ದರು. ಆದರೆ ಈ ಉತ್ಸವದಲ್ಲಿಯೂ ತಳವರ್ಗದವರಿಗೆ ಮುಕ್ತ ಪ್ರವೇಶವಿರಲಿಲ್ಲ. 1933ರಲ್ಲಿ ಸಾವರ್ಕರ್ ಅವರು ಎಲ್ಲರ ಪ್ರವೇಶಕ್ಕೆ ಮುಕ್ತವಾದ ಗಣಪತಿ ಉತ್ಸವ ಏರ್ಪಡಿಸುವ ಮೂಲಕ ದೇಶದ ಗಮನ ಸೆಳೆದರು.

ಜಗತ್ತು ದೇವತೆಗಳ ಇಚ್ಚೆಯಂತೆ ನಡೆಯುವ ಜಾಗವಲ್ಲ, ಬದಲಾಗಿ, ಇದು ಕೆಲವು ನಿರ್ದಿಷ್ಟ ನಿಯಮಗಳಂತೆ ನಡೆಯುವ ಒಂದು ವ್ಯವಸ್ಥಿತ ವಿಶ್ವ. ವಿಶಾಲವಾದ ಈ ಬ್ರಹ್ಮಾಂಡದಲ್ಲಿ, ನನ್ನ ಸ್ಥಾನ ಎಲ್ಲಿದೆ ಎಂಬುದು ಅರ್ಥವಾದರೆ ನಮ್ಮ ನಡುವಿನ ಜಗಳಗಳು, ಯುದ್ಧಗಳು ಎಷ್ಟು ಅರ್ಥಹೀನ ಎಂಬುದು ನಮಗೆ ಅರ್ಥವಾಗುತ್ತದೆ.

ಪ್ರತಿವ್ಯಕ್ತಿ, ಪ್ರತಿ ಜೀವಿ ಅಕ್ಷರ ಅಕ್ಷರಶಃ ತನ್ನನ್ನು ತಾನೇ ಅನುಭವಿಸುತ್ತಿರುವ ಒಂದು ರೂಪ ಮಾತ್ರ. ಧರ್ಮಗ್ರಂಥದಲ್ಲಿ ಇದೆ ಎನ್ನುವ ಮಾತ್ರಕ್ಕೆ ಎಲ್ಲವನ್ನು ನಂಬಬಾರದು. ನೋಡಿ ಪರಿಶೀಲಿಸಬೇಕು ಮುಂತಾದ ಸತ್ಯಶೋಧನೆಯ ವಿಚಾರಗಳನ್ನು ಅವರು ಸದಾ ಹೇಳುತ್ತಿದ್ದರು.

ನಿಜ ಹೇಳಬೇಕೆಂದರೆ ಇವತ್ತಿನ ಪ್ರಗತಿಪರ ಗುಂಪುಗಳಿಗೆ ಸಾವರ್ಕರ್ ಹೆಚ್ಚು ಹಿಡಿಸಬೇಕು. ಅವರು ಜಾತಿಯ ಮೇಲಾಟಗಳನ್ನು ಉಗ್ರವಾಗಿ ನಿರಾಕರಿಸಿದ್ದರು. ಅಸ್ಪೃಶ್ಯತೆ ನಿವಾರಣೆಗೆ ಪಣತೊಟ್ಟಿದ್ದರು. ದಲಿತರಿಗಾಗಿ ಶಾಲೆ, ದೇವಸ್ಥಾನಗಳನ್ನು ಕಟ್ಟಿದರು. ಎಲ್ಲರೂ ಸೇನೆಗೆ ಸೇರಬೇಕೆಂದು, ಉದ್ಯಮಶೀಲತೆಯನ್ನು ಬೆಳೆಸಿಕೊಳ್ಳಬೇಕೆಂದು ನಿರಂತರವಾಗಿ ಹೇಳುತ್ತಿದ್ದರು.

ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ಆಗ್ರಹಿಸುತ್ತಿದ್ದರು. ಶೋಷಿತ ಜನಾಂಗದ ಮಹಾಡ ಜಾತಿಯ ದಂಪತಿಗಳ ಪಾದಪೂಜೆ ಮಾಡಿದರು. ಮತಾಂತರ ಗೊಂಡು ಹೋಗಿದ್ದ ಹಿಂದೂಗಳನ್ನು ಮತ್ತೆ ಮಾತ್ರ ಧರ್ಮಕ್ಕೆ ಕರೆ ತಂದರು ಜಾತಿ ಪದ್ಧತಿಯ ನಿರ್ಮೂಲನೆಗೆಂದು ಅಂತರ್ಜಾತೀಯ ಭೋಜನ ಕೂಟಗಳನ್ನು ಏರ್ಪಡಿಸುತ್ತಿದ್ದರು.

ಅಂತರ್ಜಾತೀಯ ಮದುವೆಗಳೊಂದಿಗೆ ಅಂತರ ಪ್ರಾಂತೀಯ ವಿವಾಹಗಳನ್ನು ಅವರು ಪ್ರೋತ್ಸಾಹಿಸುತ್ತಿದ್ದರು. ತಮ್ಮ ಮಗನ ಉಪನಯನವನ್ನೇ ಮಾಡದ ಅವರು, ತಮ್ಮ ಪತ್ನಿಯ ಅಂತ್ಯಸಂಸ್ಕಾರವನ್ನು ತೀರಾ ಸರಳವಾಗಿ ನೆರವೇರಿಸಿದರು. ಉತ್ತರ ಕ್ರಿಯೆಗಳನ್ನು ಮಾಡಲೇ ಇಲ್ಲ. ಇಷ್ಟೇ ಅಲ್ಲ ಸ್ವತಃ ಅವರ ಅಂತಿಮ ಸಂಸ್ಕಾರದಲ್ಲಿ ಧಾರ್ಮಿಕ ವಿಧಿಗಳು ಇರಲಿಲ್ಲ.

ಪ್ರಸಿದ್ಧ ಗಾಯಕಿ ಲತಾ ಮಂಗೇಶ್ಕರ್ ಅವರ ದೀನನಾಥ್ ಮಂಗೇಶ್ಕರ್ ಮೇಲಿಂದ ಮೇಲೆ ಸಾವರ್ಕರ್ ಸದನಕ್ಕೆ ಭೇಟಿ ಕೊಡುತ್ತಿದ್ದರು. ಎರಡು ಕುಟುಂಬಗಳ ನಡುವೆ ಹ್ಯಾಪಿ ಸ್ನೇಹವಿತ್ತು. ದೀನನಾಥ್ ಅವರೊಂದಿಗೆ ಸಾವರ್ಕರರು ರಾಜಕೀಯ ಕಲೆ ಸಂಸ್ಕೃತಿ ಧಾರ್ಮಿಕ ವಿಚಾರಗಳ ಕುರಿತು ಚರ್ಚಿಸುತ್ತಿದ್ದರು. ಸಾವರ್ಕರ್‌ರ ಪ್ರೇರಣೆಯಿಂದ ಮಂಗೇಶ್ಕರ್ ಕುಟುಂಬದವರು ಸಾಮೂಹಿಕ ಊಟ ಮತ್ತು ಮೂಢನಂಬಿಕೆ ವಿರೋಧಿ ಚಟುವಟಿಕೆಯಲ್ಲಿ ಭಾಗವಹಿಸುತ್ತಿದ್ದರು.

ಸಾವರ್ಕರ್‌ರ ಸಾರ್ವಜನಿಕ ಸೇವೆಯನ್ನು ಗಮನಿಸಿದ ಗಾಯಕಿ ಲತಾ ಮಂಗೇಶ್ಕರ್ ದೇಶದ ಹಿತಕ್ಕೋಸ್ಕರ ನಿಮ್ಮೊಂದಿಗೆ ಸೇರಿ ಕೆಲಸ ಮಾಡಬೇಕೆಂಬ ಆಸೆ ನನಗೆ ತೀವ್ರವಾಗಿದೆ. ಇದಕ್ಕಾಗಿ ನಾನು ಗಾಯನವನ್ನು ಬೇಕಾದರೂ ಬಿಡಲು ಸಿದ್ಧ ಎಂದು ಹೇಳಿದರಂತೆ. ನೀನು ಹಾಗೆಲ್ಲ ಮಾಡುಕೂಡದು. ನಿನಗೆ ಒಲಿದಿರುವ ಗಾಯನವನ್ನು ನೀನು ಸಂಪೂರ್ಣವಾಗಿ ಬಳಸಿಕೊಳ್ಳುವುದು ಕೂಡ ಭಾರತಮಾತೆಯ ಸೇವೆ ಆಗಲಿದೆ. ಆದ್ದರಿಂದ ನೀನು ನಿನ್ನ ಕ್ಷೇತ್ರದಲ್ಲಿ ಮುಂದುವರಿ ಎಂದು ಹೇಳಿದ್ದರು. ಸಾವರ್ಕರ್‌ರ ಕಾವ್ಯ ಕೂಡ ಬಹಳ ಶಕ್ತಿಶಾಲಿಯಾದದ್ದು. ಈ ಗೀತೆಗಳು ಯುವಕರಲ್ಲಿ ರಾಷ್ಟ್ರೀಯ ಪ್ರಜ್ಞೆ ಬೆಳಗುತ್ತವೆ.

- **ಲಕ್ಷ್ಮಣ ಆರ್.** ನಿರಾಣಿ

# ಭ್ರಷ್ಟಾಚಾರ ವಿರೋಧಿಸುವ ಮನಸ್ಥಿತಿ ಬೆಳೆಸಿಕೊಳ್ಳಿ

## ಸ್ವಜನ ಪಕ್ಷಪಾತ, ಜಾತೀಯತೆಯಿಂದ ಹೊರತಾಗಿರಬೇಕು: ವಿಶ್ವ ಒಕ್ಕಲಿಗರ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅಭಿಮತ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಜನರು ಭ್ರಷ್ಟಾಚಾರವನ್ನು ಧೈರ್ಯವಾಗಿ ವಿರೋಧಿಸುವ ಮನಸ್ಸು ಮಾಡಿದರೆ ಖಂಡಿತ ಅದಕ್ಕೆ ಕಡಿವಾಣ ಹಾಕಬಹುದೆಂದು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಹೇಳಿದರು.

ಪಟ್ಟಣದ ಕರ್ನಾಟಕ ಸಂಘದ ಆವರಣದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಭ್ರಷ್ಟಾಚಾರ ನಿರ್ಮೂಲನ ಹಾಗು ಕಾರ್ಯಾಚರಣೆ ಸಮಿತಿ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ಭ್ರಷ್ಟಾಚಾರವನ್ನು ತಿಳುವಳಿಕೆ ಮೂಲಕ ಪರಿಹರಿಸುವ ಪ್ರಯತ್ನ ಆಗಬೇಕು. ಸ್ವಜನ ಪಕ್ಷಪಾತ, ಜಾತೀಯತೆಯಿಂದ ಹೊರತಾಗಿರಬೇಕು. ಸಂಘಟನಾತ್ಮಕ ಹೋರಾಟ ಹೆಚ್ಚಾದರೆ ಭ್ರಷ್ಟಾಚಾರವನ್ನು ತಗ್ಗಿಸಲು ಸಾಧ್ಯವಿದೆ ಯೆಂದು ಹೇಳಿದರು.

ಲಂಚ ಸ್ವೀಕರಿಸುವುದಷ್ಟೇ ಭ್ರಷ್ಟಾಚಾರವಲ್ಲ, ಆ ರೀತಿ ಯೋಚನೆ ಮಾಡುವುದು ಸಹ ಭ್ರಷ್ಟಾಚಾರವಾಗುತ್ತದೆ. ಕನಸು ಮನಸ್ಸಿನಲ್ಲಿಯೂ ಭ್ರಷ್ಟಾಚಾರದ ಪರವಾಗಿ ಯೋಚಿಸಬಾರದು. ಸದಾ ನಮ್ಮ ಮನಸ್ಸು ಭ್ರಷ್ಟಾಚಾರದ ವಿರುದ್ಧವಾಗಿರಬೇಕು. ಭ್ರಷ್ಟಾಚಾರ ಹೋರಾಟ ಸಣ್ಣ ವಿಚಾರವಲ್ಲ, ಅತ್ಯಂತ ಕಠಿಣ ಸಂದರ್ಭಗಳು ಎದುರಾಗುತ್ತವೆ. ಅಂತಹ ಪರಿಸ್ಥಿತಿಗಳನ್ನು ಎದುರಿಸಲು ಸಂಘಟಿತರಾಗಿ ದೃಢವಾಗಿ ನಿಂತರೆ ಹಂತ ಹಂತವಾಗಿ ಲೋಪ ತಡೆಯಲು ಸಾಧ್ಯವಿದೆ. ಯುದ್ಧವನ್ನು ಬೇಕಾದರೆ ಗೆಲ್ಲಬಹುದು ಆದರೆ, ಭ್ರಷ್ಟಾಚಾರವನ್ನು ಸೋಲಿಸುವುದು ಬಹಳ ಕಷ್ಟದ ಕೆಲಸವೆಂದರು.

ಹಿಂದಿನ ದಿನಗಳಲ್ಲಿ ಸರ್ಕಾರಿ ಕಚೇರಿಗಳಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರಗಳನ್ನು ಏಕಾಂಗಿಯಾಗಿ ಎದುರಿಸುತ್ತಿದ್ದ ಕಾಲವಿತ್ತು. ಇತ್ತೀಚಿನ ದಿನಮಾನಗಳಲ್ಲಿ ಇಂತಹ ಸಂಘಟನೆಗಳು ಹುಟ್ಟಿಕೊಂಡಿರುವುದು ಒಂದು ರೀತಿಯ ಸಾಂಸ್ಥಿಕ ಹೋರಾಟಕ್ಕೆ ಬಲ ಸಿಕ್ಕಂತಾಗಿದೆ. ಗುಂಪಿನಲ್ಲಿ ಹೋಗಿ ಭ್ರಷ್ಟಾಚಾರಿಗಳನ್ನು ಧೈರ್ಯವಾಗಿ ಕೇಳುವ ಪ್ರಯತ್ನಗಳಾದರೆ ಭ್ರಷ್ಟಾಚಾರಿಗಳು ಸಹ ಹೆದರುತ್ತಾರೆ. ಇಂತಹ ಸಂಘಟನೆಗಳ ಅವಶ್ಯಕತೆ ದೇಶಾದ್ಯಂತ ಇದೆ, ಇದರ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳುವಂತಾಗಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಹಾಸನದ ನಿವೃತ್ತ ಸೆಷನ್ಸ್ ನ್ಯಾಯಾಧೀಶ ಬಿ. ವೆಂಕಟೇಶ್ ಅವರು ಮಾತನಾಡಿ, ಭ್ರಷ್ಟಾಚಾರ ನಿರ್ಮೂ ಲನೆ ಮಾಡುವಲ್ಲಿ ನಾನು ಸಹ ನಿಮ್ಮ ಜೊತೆ ಕೈಜೋಡಿಸುತ್ತೇನೆ. ನಾನು ಹಾಸನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪ್ರತಿನಿತ್ಯ ಸಾರ್ವಜನಿಕರಿಗೆ ಲಭ್ಯ ವಿದ್ದು ನಾನು ಕಾನೂನು ರೀತಿಯ ಸಲಹೆಗಳನ್ನು ನೀಡುತ್ತೇನೆಂದರು.

ಅಧ್ಯಕ್ಷತೆ ವಹಿಸಿದ್ದ ಸಮಿತಿಯ ಅಧ್ಯಕ್ಷ ಎನ್.ಎಸ್.ಮಂಜುನಾಥ್ ಅವರು ಮಾತನಾಡಿ, ನಮ್ಮ ದೇಶ ಜಗತ್ತಿನ ಭ್ರಷ್ಟಾಚಾರ ಪಟ್ಟಿಯಲ್ಲಿ 91 ಸ್ಥಾನದಲ್ಲಿದೆ. ಈ ಭ್ರಷ್ಟಾಚಾರವು ಭಾರತದ ಆತ್ಮದ ಮೇಲೆ ನಡೆಯುತ್ತಿರುವ ಆಕ್ರಮಣವಾಗಿದೆ.

ಭ್ರಷ್ಟಾಚಾರದಲ್ಲಿ ತೊಡಗಿಸಿಕೊಳ್ಳುವುದು ಎಷ್ಟು ಅಪರಾಧವೋ ಅದಕ್ಕೆ ಪ್ರೋತ್ಸಾಹಿಸುವುದು ಕೂಡ ಅಷ್ಟೇ ಅಪರಾಧವಾಗಿದೆ ಎಂದರು.

ಇದನ್ನು ಸಂಘಟಿತ ರೂಪದಲ್ಲಿ ದೇಶಾದ್ಯಂತ ನಿರ್ಮೂಲನೆ ಮಾಡುವ ಪಣತೊಟ್ಟು ಈ ಹಿಂದೆ ಅಣ್ಣ ಹಜಾರೆಯವರ ಜೊತೆಯಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಡಿದ ರಾಷ್ಟ್ರೀಯ ಅಧ್ಯಕ್ಷ ಡಾ. ರಾಜೇಶ್ ಶುಕ್ಲ ಅವರು 2012ರಲ್ಲಿ ಸಮಿತಿ ಸ್ಥಾಪನೆ ಮಾಡಿದ್ದಾರೆಂದರು.

ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ದಯಾನಂದ್, ಶ್ರೀಶೈಲ ಕುಂಬಾರ, ವಿಭಾಗಿಯ ಅಧ್ಯಕ್ಷ ಎಸ್. ಗುರುಸ್ವಾಮಿ, ಮಾಧ್ಯಮ ಕಾರ್ಯದರ್ಶಿ ಪ್ರಸನ್ನ ಕುಮಾರ್, ಜಿಲ್ಲಾಧ್ಯಕ್ಷ ಟಿ.ಮಲ್ಲೇಶ್, ಕೆ.ಎಂ.ಪುಷ್ಪಾವತಿ ಮತ್ತಿತರರಿದ್ದರು.



### ಪದಾಧಿಕಾರಿಗಳ ಪದಗ್ರಹಣ

ರಾಷ್ಟ್ರೀಯ ಭ್ರಷ್ಟಾಚಾರ ನಿರ್ಮೂಲನ ಹಾಗು ಕಾಯಾಚರಣೆ ಸಮಿತಿ ಅಧ್ಯಕ್ಷರಾಗಿ ಎನ್.ಎಸ್.ಮಂಜುನಾಥ, ಪ್ರಧಾನ ಕಾರ್ಯದರ್ಶಿಯಾಗಿ ಎ.ಎಂ.ಜಯರಾಮ್, ಖಜಾಂಚಿ ಸ್ಥಾನಕ್ಕೆ ಎಸ್.ಎಂ.ಪುಷ್ಪ, ಯಶೋಧ ಕಾರ್ಯಧ್ಯಕ್ಷೆ, ಉಪಾಧ್ಯಕ್ಷರಾಗಿ ಬಿ.ರಾಘವೇಂದ್ರ, ಎನ್.ಜೆ. ಸೋಮನಾಥ, ಡಿ.ಕೆ.ಮಧು, ಜಂಟಿ ಕಾರ್ಯದರ್ಶಿಯಾಗಿ ಕೆ.ಎಸ್. ವೇದ, ಬಿ.ಎಲ್.ಅರುಣ್ ಕುಮಾರ್, ಸಂಘಟನಾ ಕಾರ್ಯದರ್ಶಿಯಾಗಿ ಎನ್.ಭಗವಾನ್, ಸಿ.ಎಲ್.ಮಹದೇವ, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಸಿ.ಎಂ.ಸರಸ್ವತಿ, ಕಾರ್ಯದರ್ಶಿಯಾಗಿ ಹೆಚ್.ವಿ.ಸಿದ್ದೇಶ್ ಅಧಿಕಾರ ವಹಿಸಿಕೊಂಡರು.

# ತೂಕದಲ್ಲಿ ಮುಂದುವರಿದ ಮೋಸದಾಟ

» ಮೊದಲನೇ ಪುಟದಿಂದ

ಇಲಾಖೆಯವರನ್ನು ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ. ಸೋಮವಾರ ಅಧಿಕಾರಿಗಳನ್ನು ಕರೆಯಿಸಿ ಸಮಸ್ಯೆ ನಿವಾರಣೆ ಮಾಡಲಾಗುವುದು. ರೈತ ಸಂಘಟನೆಯವರು ಅಕ್ರಮ ರಾಗಿ, ಅಧಿಕೃತವಲ್ಲದ ರೈತರಿಂದ ವರ್ತಕರು ಈ ರೀತಿ ಹೆಚ್ಚುವರಿಯಾಗಿ ರಾಗಿ ಕಳ್ಳತನ ಮಾಡುತ್ತಿದ್ದಾರೆಂಬುದು ಅವರ ಆರೋಪವಾಗಿದೆ. ಇಲ್ಲಿ ನಿಜವಾಗಿ ರಾಗಿ ಮಾರುವ ರೈತರು, ಅಧಿಕಾರಿಗಳ ಮಾಹಿತಿಯನ್ನು ಮಾತ್ರ ಪಡೆಯಲಾಗುವುದು. ಇತರರು ಮಾತನಾಡುವ ಅಗತ್ಯವಿಲ್ಲ ಎಂದು ತಹಶೀಲ್ದಾರ್ ಎಚ್ಚರಿಕೆ ನೀಡಿದರು.

ಅರಕಲಗೂಡು ಮತ್ತು ರಾಮನಾಥಪುರ ರಾಗಿ ಖರೀದಿ ಕೇಂದ್ರದಲ್ಲಿನ ಖರೀದಿ ಅಧಿಕಾರಿಗಳ ಕುಮ್ಮಕ್ಕಿನಿಂದಲೇ ಈ ರೀತಿಯಾಗಿ ರೈತರನ್ನು ವಂಚಿಸಲಾಗುತ್ತಿದೆ. ಕಳೆದ ಮೂರು ದಿನಗಳಿಂದಲೂ ರೈತ ಸಂಘ ಪತ್ತೆ ಹಚ್ಚಿರುವ ಕಳ್ಳತನದ ರಾಗಿಯನ್ನು ಇದುವರೆಗೂ ಮುಟ್ಟುಗೋಲು ಹಾಕಿಕೊಂಡಿಲ್ಲ. ಬದಲಾಗಿ ಇಂದು ಈ ರೀತಿಯಾಗಿ ಕಳ್ಳತನ ಮಾಡಿರುವ 55 ಚೀಲಕ್ಕೂ ಅಧಿಕ ರಾಗಿಯನ್ನು ಲಾರಿಗೆ ತುಂಬಲಾಗಿದೆ. ಇದು ಯಾವ ರೈತನಿಗೆ ಸೇರಿದ ರಾಗಿ ಎಂಬುದನ್ನು ಸಾಬೀತುಪಡಿಸಿ ಎಂದರೆ ನಮ್ಮ ಮೇಲೆ ದರ್ಪ ತೋರಲಾಗುತ್ತಿದೆ. ಇಲ್ಲಿ ಅಧಿಕಾರಿಗಳ ಬದಲಿಗೆ ಬಾಡಿಗೆ ದಲ್ಲಾಳಿಗಳು, ರೈತರಲ್ಲದವರು ದಬ್ಬಾಳಿಕೆ ಮಾಡುತ್ತಿದ್ದಾರೆ. ಪ್ರಮುಖವಾಗಿ ರಾಗಿ ತುಂಬುವ ಕೆಲಸಗಾರರು ಕೂಡ ನಮ್ಮ ಮೇಲೆ ಗಲಾಟೆಗೆ ಬರುತ್ತಾರೆ. ರೈತರಿಂದ ಅಕ್ರಮವಾಗಿ ರಾಗಿ ಎತ್ತುವಳಿ ಮಾಡಲು ಮಧ್ಯವರ್ತಿಗಳು, ಚೀಲ ತುಂಬುವರಿಂದಲೇ ನಡೆಯುತ್ತಿದೆ. ಇದನ್ನು ನಿಯಂತ್ರಿಸಿದರೇ ಸುಗಮವಾಗಿ ರೈತರ ರಾಗಿ ಖರೀದಿ ನಡೆಯುತ್ತದೆ.

ಈ ದೌರ್ಜನ್ಯ ಸರಿಪಡಿಸದಿದ್ದರೇ ಸೋಮವಾರದಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಮಾಡಬೇಕಾಗುತ್ತದೆಂದು ರೈತ ಸಂಘದ ಅಧ್ಯಕ್ಷ ಭುವನೇಶ್ ಎಚ್ಚರಿಸಿದರು.

### ಪುಟ್ಟ ಮಗುವಿನೊಂದಿಗೆ ಬಂದ ತಹಶೀಲ್ದಾರ್

ಅಧಿಕಾರ ಎನ್ನುವುದು ಕೇವಲ ಕುರ್ಚಿಯಲ್ಲ, ಅದು ಜವಾಬ್ದಾರಿ ಎಂಬುದನ್ನು ಅರಕಲಗೂಡು ತಹಶೀಲ್ದಾರ್ ಸೌಮ್ಯ ಅವರು ಸಾಬೀತುಪಡಿಸಿದ್ದಾರೆ. ರೈತರ ಸಂಕಷ್ಟಕ್ಕೆ ಸ್ಪಂದಿಸಲು ತಮ್ಮ ಪುಟ್ಟ ಕಂದಮ್ಮನನ್ನು ಎತ್ತಿಕೊಂಡೇ ಸ್ಥಳಕ್ಕೆ ಆಗಮಿಸುವ ಮೂಲಕ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ತಹಶೀಲ್ದಾರ್ ಸೌಮ್ಯ ಅವರು ಕಚೇರಿ ಕೆಲಸದ ಒತ್ತಡ ಹಾಗು ಮಗುವಿನ ಪಾಲನೆಯ ನಡುವೆಯೂ ರೈತರ ಕರೆಗೆ ಓಗೊಟ್ಟಿದ್ದಾರೆ.

# ರೈತ ವಿರೋಧಿ ನೀತಿ ಹಿಮ್ಮೆಟ್ಟಿಸದಿದ್ದರೆ ಕೃಷಿ ಬಿಕ್ಕಟ್ಟು

## ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷ ಯು.ಬಸವರಾಜ ಕಳವಳ

• ಪ್ರಜೋದಯ ವರದಿ

**ಹಾಸನ:** ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸದಿದ್ದರೆ, ಬಿಕ್ಕಟ್ಟಿನಲ್ಲಿರುವ ಕೃಷಿಯನ್ನಾಗಲಿ ಅಥವಾ ಸಂಕಷ್ಟದಲ್ಲಿರುವ ರೈತ ಸಮುದಾಯವನ್ನಾಗಲಿ ಉಳಿಸಿಕೊಳ್ಳಲು ಸಾಧ್ಯವಿಲ್ಲವೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷ ಯು.ಬಸವರಾಜ ಅವರು ಹೇಳಿದರು.

ನಗರದ ಸ್ವಾಭಿಮಾನಿ ಭವನದಲ್ಲಿ ಶನಿವಾರ ನಡೆದ ಕರ್ನಾಟಕ ಪ್ರಾಂತ ರೈತ ಸಂಘದ (ಕೆಪಿಆರ್ಎಸ್) 3ನೇ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರದ ನರೇಂದ್ರ ಮೋದಿ ಸರ್ಕಾರ ರೈತರ ಆದಾಯವನ್ನು ದ್ವಿಗುಣ ಗೊಳಿಸುತ್ತೇನೆಂದು ಭರವಸೆ ನೀಡಿ, ವಿದ್ಯುತ್ ಖಾಸಗೀಕರಣ, ಬೀಜ ಮಸೂದೆ, ಭೂಸ್ವಾಧೀನ ತಿದ್ದುಪಡಿ ಕಾಯ್ದೆ, ಗ್ರಾಮೀಣ ಉದ್ಯೋಗಖಾತ್ರಿ ಯೋಜನೆ ತಿದ್ದುಪಡಿ ಮಾಡುವ ಮೂಲಕ ರೈತರ ಮತ್ತು ಕೂಲಿ ಕಾರರ ಆದಾಯವನ್ನು ಸಂಪೂರ್ಣವಾಗಿ ಕುಸಿಯುವಂತೆ ಮಾಡಿದೆ ಎಂದು ಆರೋಪಿಸಿದರು.

ಒಂದು ಕಡೆ ಸರ್ಕಾರಿ ಮತ್ತು ಅರಣ್ಯ ಭೂಮಿಗಳಲ್ಲಿ ಉಳುಮೆ ಮಾಡುತ್ತಿರುವ ರೈತರಿಗೆ ಹಕ್ಕುಪತ್ರಗಳನ್ನು ನೀಡದೆ, ಮತ್ತೊಂದು ಕಡೆ ಫಲವತ್ತಾದ ಕೃಷಿಯೋಗ್ಯ ಭೂಮಿಯನ್ನು ವಿವಿಧ ಯೋಜನೆಗಳ ಹೆಸರಿನಲ್ಲಿ ಭೂಸ್ವಾಧೀನ ಮಾಡಿಕೊಳ್ಳುವ ಪ್ರಕ್ರಿಯೆಯಿಂದಾಗಿ ಕೃಷಿಯನ್ನು ಬಿಟ್ಟು ನಗರ ಪ್ರದೇಶಗಳಿಗೆ ವಲಸೆ ಹೋಗುವವರ ಸಂಖ್ಯೆ ಹೆಚ್ಚಾಗುತ್ತಿದೆ. ಇಂತಹ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳದಿದ್ದರೆ ದೇಶಕ್ಕೆ ಅನ್ನ ನೀಡುವ ರೈತಾಪಿ ವರ್ಗ ಸಂಪೂರ್ಣ ನಾಶ ವಾಗುತ್ತದೆಂದು ಆತಂಕ ವ್ಯಕ್ತಪಡಿಸಿದರು.

ದೇಶದಲ್ಲಿ ಭೂಮಿಯನ್ನೇ ನಂಬಿ ದುಡಿಮೆ ಮಾಡುತ್ತಿರುವ ರೈತರು ಮತ್ತು ಕೂಲಿಕಾರರ ಆದಾಯ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಅದೇ ಸಮಯದಲ್ಲಿ ದೇಶದ ಕೆಲವೇ ಕೆಲವು ಶ್ರೀಮಂತರ ಆದಾಯ ಮತ್ತು ಆಸ್ತಿ ಎಲ್ಲೇ ಮೀರಿ ಬೆಳೆಯುತ್ತಿದೆ. ರೈತರು ಜಾಗೃತರಾಗ ದಂತೆ ಅವರ ಮೇಲೆ ಜಾತಿ, ಧರ್ಮ ಮತ್ತು ದೇವರು, ಪಾಪ, ಪುಣ್ಯದಂತಹ ಮೌಢ್ಯದ ವಿಚಾರಗಳನ್ನು ತುಂಬಿ ದಾರಿತಪ್ಪಿಸಲಾಗುತ್ತಿದೆ. ಅವರ ನಡುವಿನ ಐಕ್ಯತೆಯನ್ನು ವ್ಯವಸ್ಥಿತವಾಗಿ ಒಡೆಯು ಮೂಲಕ ಆಳುವ ವರ್ಗ ಲಾಭ ಮಾಡಿಕೊಳ್ಳುತ್ತಿದೆ. ರೈತರು ಮತ್ತು ಕೃಷಿಯನ್ನು ಉಳಿಸಲು ಎಲ್ಲಾ ದುಡಿಯುವ ಜನ ಒಗ್ಗಟ್ಟಾಗಿ ಸಂಘಟಿತ ಹೋರಾಟ ನಡೆಸಬೇಕೆಂದರು.

ಸಿ.ಐ.ಟಿ.ಯು. ಜಿಲ್ಲಾ ಅಧ್ಯಕ್ಷ ಧರ್ಮೇಶ್ ಅವರು ಮಾತನಾಡಿ, ಜಿಲ್ಲೆಯಲ್ಲಿ ರೈತರ ಹಲವು ಪ್ರಶ್ನೆಗಳಿಗೆ ಕರ್ನಾಟಕ ಪ್ರಾಂತ ರೈತ ಸಂಘ ನಿರ್ಣಾಯಕ ಮಧ್ಯಪ್ರವೇಶವನ್ನು ಮಾಡುತ್ತಿದೆ. ಅದೇ ಸಂದರ್ಭದಲ್ಲಿ ನಮ್ಮ ಕೂಗು ಇನ್ನೂ ಪ್ರಬಲವಾಗಿ ಆಳುವವರಿಗೆ ಕೇಳಿಸುವಂತಾಗಬೇಕು. ಆಗ ಮಾತ್ರ ರೈತರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದರು.

ಹಾಸನ ಕೃಷಿ ಪ್ರಧಾನ ಜಿಲ್ಲೆ. ಇಲ್ಲಿ ಹಲವು ರೈತ ಚಳುವಳಿಗಳು ನಡೆದ ಉದಾಹರಣೆಗಳಿವೆ, ಕಾಲಘಟ್ಟ ಬದಲಾಗಿದ್ದು ರೈತರು ತಮ್ಮ ಸಮಸ್ಯೆಗಳಿಗೆ ತಾವೇ ಪರಿಹಾರ ಕಂಡುಕೊಳ್ಳಲು ತಾವೇ ಹೋರಾಟ ನಡೆಸಬೇಕು. ನಮ್ಮಿಂದ ಆಯ್ಕೆಯಾಗಿ ಹೋದ ಯಾವ ಪಕ್ಷದ ರಾಜಕಾರಣಿಗಳು ಮತ್ತು ಜನಪ್ರತಿನಿಧಿಗಳಿಂದಲೂ ರೈತರ ಸಮಸ್ಯೆಗೆ ಪರಿಹಾರ ದೊರಕುತ್ತಿಲ್ಲ. ಜಿಲ್ಲೆಯಲ್ಲಿ ಕೆಂಬಾ ವುಟದ ಅಡಿಯಲ್ಲಿ ರೈತರನ್ನು ಸಂಘಟಿಸಲು ಕಾರ್ಮಿಕ ಸಂಘಟನೆ ಯಾವಾಗಲೂ ಸಹಕಾರಿಯಾಗಿರುತ್ತದೆಂದು ತಿಳಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ ಹೆಚ್.ಆರ್.ನವೀನ್ ಕುಮಾರ್ ಮಾತನಾಡಿ, ರೈತ ಸಮುದಾಯವನ್ನು ಸಂಪೂರ್ಣವಾಗಿ ನಿರ್ನಾಮ ಮಾಡುವ ರೀತಿ ನೀತಿಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಜಾರಿಯಾಗುತ್ತಿವೆ. ನಾವೇ ಬೆಳೆಯುತ್ತಿರುವ ಬಹುತೇಕ ಕೃಷಿ ಉತ್ಪನ್ನಗಳನ್ನು ವಿದೇಶಗಳಿಂದ ಮತ್ತು ಅಮೇರಿಕಾದಿಂದ ತರಿಸಿಕೊಳ್ಳುವ ಒಪ್ಪಂದವನ್ನು ಭಾರತ ಸರ್ಕಾರ ಮಾಡಿಕೊಂಡು ರೈತರ ಬದುಕಿನ ಮೇಲೆ ಗದಾಪ್ರಹಾರ ಮಾಡುತ್ತಿದೆ ಎಂದು ಆರೋಪಿಸಿದರು.

ಜಿಲ್ಲಾ ರೈತ ಮುಖಂಡರಾದ ಹೆಚ್.ಎಸ್.ಮಂಜುನಾಥ್, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ, ದಲಿತ ಹಕ್ಕುಗಳ ಸಮಿತಿ ಸಂಚಾಲಕ ಎಂ.ಜಿ.ಪೃಥ್ವಿ, ರೈತ ಮುಖಂಡರಾದ ಗಿಡ್ಡೇಗೌಡ, ತೇಜಸ್‌ಗೌಡ ಹಾಜರಿದ್ದರು.




# ಹಿರೀಸಾವೆಯಲ್ಲಿ ಶ್ರೀ ಆಯಿ ಮಾತಾ ದೇವಿ ಉತ್ಸವ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಹಿರೀಸಾವೆ ಗ್ರಾಮದಲ್ಲಿ ಸಿರವಿ ಸಮಾಜದ ವತಿಯಿಂದ ಶ್ರೀ ಆಯಿ ಮಾತಾ (ಶ್ರೀ ಚಾಮುಂಡೇಶ್ವರಿ ಅವತಾರ) ದೇವಿಯ ಎತ್ತಿನ ಬಂಡಿ ಉತ್ಸವ ಹಾಗೂ ವಿಶೇಷ ಪೂಜೆ ಶನಿವಾರ ವಿಜೃಂಭಣೆಯಿಂದ ನಡೆಯಿತು.

ನೂರಾರು ವರ್ಷಗಳ ಹಿಂದೆಯೇ ರಾಜಸ್ಥಾನ್ ರಾಜ್ಯದ ಜೋಡುಪುರ್ ಜಿಲ್ಲೆಯ ಬಿಲ್ಲಾಡ ಗ್ರಾಮದಿಂದ ಆಗಮಿಸಿ ತಾಲ್ಲೂಕಿನ ಹಿರೀಸಾವೆ ಗ್ರಾಮದಲ್ಲಿ ಸಿರವಿ ಸಮುದಾಯದ 17 ಕುಟುಂಬಗಳು ನೆಲೆಸಿದ್ದು ಗ್ರಾಮದೇವತೆ ಶ್ರೀ ಆಯಿ ಮಾತಾ ದೇವಿಯನ್ನು ಇಲ್ಲಿಗೆ ಇದೇ ಮೊದಲ ಬಾರಿಗೆ ಕರೆ ತಂದಿರುವುದು ವಿಶೇಷವಾಗಿದೆ.

ಸುಮಾರು 1,850 ಕಿಮೀ ದೂರದ ರಾಜಸ್ಥಾನದಿಂದ ದೇವಿಯನ್ನು ಬಸ್ಸಿನಲ್ಲಿ ಹಿರೀಸಾವೆ ಗ್ರಾಮಕ್ಕೆ ಕರೆತರಲಾಗಿದ್ದು ಅಲ್ಲಿಂದಲೇ ಬಸ್ಸಿನಲ್ಲಿ ಕರೆತರಲಾಗಿದ್ದ ಎತ್ತಿನ ಬಂಡಿಯಲ್ಲಿ ಉತ್ಸವ ಮಾಡಲಾಯಿತು.

ಹಿನ್ನೆಲೆಯಲ್ಲಿ ಮುಂಜಾನೆಯೇ ಸಮುದಾಯ ಭವನಕ್ಕೆ ಹಸಿರು ಚಪ್ಪರ ಹಾಕಲಾಗಿದ್ದು ತಳಿರು ತೋರಣ ಹಾಗೂ ವಿವಿಧ ಬಗೆಯ ಪುಷ್ಪಗಳಿಂದ ಸಿಂಗರಿಸಲಾಗಿತ್ತು.

ಸಿರವಿ ಸಮುದಾಯದ ಹೆಣ್ಣುಮಕ್ಕಳು ಕಳಸ ಹೊತ್ತು ಶ್ರೀ ಚಾಮುಂಡೇಶ್ವರಿ ದೇವಿಯ ಅವತಾರ ಎನ್ನಲಾದ ಶ್ರೀ ಆಯಿ ಮಾತಾ ದೇವಿಯನ್ನು ಪೂರ್ಣ ಕುಂಭದೊಂದಿಗೆ ಸ್ವಾಗತಿಸಿದರು.

ಸಿರವಿ ಸಮುದಾಯ ಭವನದಲ್ಲಿ ದೇವಿಯನ್ನು ಪ್ರತಿಷ್ಠಾಪಿಸಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಆಶೀರ್ವಾದ ಪಡೆದರು. ಸೋಬಾನೆ ಪದ, ಭಜನೆ ನಂತರ ಮಹಾ ಮಂಗಳಾರತಿ ಬೆಳಗಿಸಲಾಯಿತು. ನಂತರ ಅನ್ನದಾಸೋಹ ನಡೆಯಿತು.

ಸಿರವಿ ಸಮಾಜದ ಅಧ್ಯಕ್ಷ ನಾರಾಯಣ್ ಲಾಲ್, ಸಚಿವ ತೇಜಾ ರಾಮ್, ಖಜಾಂಚಿ ರಮೇಶ್ ಧಾತ, ಪ್ರಮುಖರಾದ ಈಶ್ವರ್ ಗುರ್ಜರ್, ಮೂಳಾ ರಾಮ್, ಚೇನಾ ರಾಂ, ತೇಜಾ ರಾಮ್, ಓಂ ಪ್ರಕಾಶ್ ಸಿರವಿ, ಮನೋಹರ್ ಲಾಲ್, ಸಂದೀಪ್ ಬಿ. ದೇಶಮುಖ್, ಪುರುಷೋತ್ತಮ್ ಸಿರವಿ, ತೇಜಾ ರಾಮ್, ರಮೇಶ್ ಸಿರವಿ ದಾತ, ರಾಜು ಜೀ ಪುರೋಹಿತ್, ಹಿರಲಾಲ್ ಕಲಾಲ್, ಹಿರಲಾಲ್ ಸಿರವಿ, ದಿನೇಶ್ ಲಾಲ್ ಕಾಯಕ್ ಹಾಗೂ ಸಿರವಿ ಸಮಾಜದ ಎಲ್ಲ ಸದಸ್ಯರು ಪಾಲ್ಗೊಂಡಿದ್ದರು.



# ವಿಜಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಮಕ್ಕಳ ಸಾಹಿತ್ಯೋತ್ಸವ

• ಪ್ರಜೋದಯ ವರದಿ

**ಹಾಸನ:** ನಗರದ ವಿಜಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ದಿ ಹಾಸನ್ ಲಿಟರೇಚರ್ ಫೆಸ್ಟಿವಲ್ 2026ಕ್ಕೆ ಶನಿವಾರ ಅದ್ದೂರಿ ಚಾಲನೆ ನೀಡಲಾಯಿತು.

ಇದೇ ಮೊದಲ ಬಾರಿಗೆ ಹಾಸನದಲ್ಲಿ ಹಮ್ಮಿಕೊಂಡಿರುವ ಮಕ್ಕಳ ಸಾಹಿತ್ಯೋತ್ಸವಕ್ಕೆ ವಿವಿಧ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಭಾಗವಹಿಸಿ ಮೆರುಗು ತಂದರು. ಪುಸ್ತಕ ಮಳಿಗೆ ಮಾತ್ರವಲ್ಲದೆ ಚಿತ್ರಕಲೆ ಸ್ಪರ್ಧೆ, ಗೋಡೆ ಬರಹ, ಸಾಂಸ್ಕೃತಿಕ ಕಾರ್ಯಕ್ರಮಗಳು ಸಾಹಿತ್ಯೋತ್ಸವದ ಮೆರುಗು ಹೆಚ್ಚಿಸಿದವು. ಉದ್ಘಾಟನಾ ಕಾರ್ಯಕ್ರಮದ ಬಳಿಕ ನಡೆದ ನಂದಿತಾ ರಾವ್ ಅವರ ಸಂವಾದ ಮಕ್ಕಳ ಬುದ್ಧಿ ಶಕ್ತಿಗೆ ಸಾಣೆ ಹಿಡಿದಂತಾಯಿತು.

ಸಮಾರಂಭಕ್ಕೆ ಚಾಲನೆ ನೀಡಿದ ಲೇಖಕ ಜೋಗಿ ಅವರು ಮಾತನಾಡಿ, ದೇಹಕ್ಕೆ ಆಗುವ ಗಾಯವನ್ನು ವಿಜ್ಞಾನದಿಂದ ಪರಿಹರಿಸಬಹುದು. ಆದರೆ, ಮನಸ್ಸಿಗೆ ಆಗುವ ಗಾಯಗಳಿಂದ ಮುಕ್ತಿ ಪಡೆಯಲು ಸಾಹಿತ್ಯ ಅತ್ಯವಶ್ಯವೆಂದು ಅಭಿಪ್ರಾಯಪಟ್ಟರು.

ಮನಸ್ಸಿನ ನೋವು ಮರೆಯಲು ಪುಸ್ತಕ ನೆರವಾಗುತ್ತದೆ. ವಿದ್ಯಾರ್ಥಿಗಳು ಈಗಿನಿಂದಲೇ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಮೈಸೂರು, ಬೆಂಗಳೂರಿನಲ್ಲಿ ನಡೆಯುವ ಸಾಹಿತ್ಯೋತ್ಸವ ಮಾದರಿಯಲ್ಲಿ ಹಾಸನದಲ್ಲೂ ಈ ವರ್ಷದಿಂದ ಸಾಹಿತ್ಯೋತ್ಸವ ಪ್ರಾರಂಭವಾಗಬೇಕು. ಅದಕ್ಕೆ ವಿಜಯ ಶಾಲೆ ಮುನ್ನುಡಿ ಬರೆದಿದೆಯೆಂದರು.

ಜೈಪುರ ಸಾಹಿತ್ಯೋತ್ಸವ ದೇಶದ ಗಮನ ಸೆಳೆದಿದೆ. ಸಾಹಿತ್ಯ ಮಕ್ಕಳಿಂದ ಶುರುವಾಗಬೇಕು ಎನ್ನುವುದನ್ನು ಅಲ್ಲಿ ನಾನು ಕಲಿತಿದ್ದೇನೆ. ಕಾರ್ಯಕ್ರಮದಲ್ಲಿ ಭಾಗವಹಿಸುವ ಮಕ್ಕಳು ಕಥೆ, ಕವನಗಳೊಂದಿಗೆ ಹಾಜರಾಗುತ್ತಾರೆ. ನಮಿತಾ, ವಿಲಿಯಂ, ಸಂಜಯ್ ಎಂಬುವವರು ಜೈಪುರ ಸಾಹಿತ್ಯೋತ್ಸವವನ್ನು ಕೇವಲ ಒಂಬತ್ತು ಜನ ಪ್ರೇಕ್ಷಕರೊಂದಿಗೆ ಶುರು ಮಾಡಿದರು. ಆದರೆ, ಇಂದು ಐದು ಲಕ್ಷ ಜನರು ಭಾಗವಹಿಸುತ್ತಾರೆ. ಸಣ್ಣ ಸಣ್ಣ ಆರಂಭಗಳು ನಂತರದ ದಿನಗಳಲ್ಲಿ ದೊಡ್ಡ ಫಲಿತಾಂಶ ನೀಡುತ್ತವೆಂದರು.

ನಮ್ಮ ಅರಿವಿನ ವಿಸ್ತಾರ ಹೆಚ್ಚಬೇಕೆಂದರೆ ಓದುವುದನ್ನು ಕಲಿಯಬೇಕು. ಸಾಹಿತ್ಯ ಒಡೆದ ಹೃದಯಗಳನ್ನು ಜೋಡಿಸುತ್ತದೆ. ಹಾಸನ ಜಿಲ್ಲೆಯವರೇ ಆದ ಎಸ್.ಎಲ್. ಭೈರಪ್ಪ, ಬೂಕರ್ ಪ್ರಶಸ್ತಿ ವಿಜೇತ ಬಾನು ಮುಷ್ತಾಕ್ ಅವರನ್ನು ವಿದ್ಯಾರ್ಥಿಗಳು ಪ್ರೇರಣೆಯಾಗಿ ಪಡೆಯ ಬೇಕೆಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ಮಕ್ಕಳಲ್ಲಿ ಸಾಹಿತ್ಯ ಅಭಿರುಚಿ, ಪುಸ್ತಕ ಓದುವ ಹವ್ಯಾಸ ಬೆಳೆಸುವ ಪುಣ್ಯದ ಕೆಲಸವನ್ನು ವಿಜಯ ಶಾಲೆಯವರು ಮಾಡುತ್ತಿರುವುದು ಹೆಮ್ಮೆಯ ವಿಚಾರ ಎಂದರು.

ಇತ್ತೀಚೆಗೆ ಓದುವವರ ಸಂಖ್ಯೆ ಕ್ಷೀಣಿಸುತ್ತಿದೆ. ಸಾಹಿತ್ಯದಿಂದ ವ್ಯಕ್ತಿತ್ವ ವಿಕಸನವಾಗುತ್ತದೆ. ಸಮಾಜ ಸ್ವಸ್ಥವಾಗಿರಬೇಕೆಂದರೆ ಸಾಂಸ್ಕೃತಿಕ ಚಟುವಟಿಕೆಗಳು ನಿರಂತರವಾಗಿರಬೇಕು. ಈ ನಾಡಿಗೆ ಒಳ್ಳೆಯ ಸಂದೇಶ ಕೊಡಬೇಕು. ಆ ನಿಟ್ಟಿನಲ್ಲಿ ವಿಜಯ ಶಾಲೆ ಒಳ್ಳೆಯ ಕಾರ್ಯಕ್ರಮ ಕೊಡುತ್ತಿದೆ. ಎಂದು ಶುಭ ಹಾರೈಸಿದರು.

ವಿಜಯ ಶಾಲೆಯ ಸಂಸ್ಥಾಪಕ ನಿರ್ದೇಶಕಿ ತಾರಾ ಎಸ್.ಸ್ವಾಮಿ, ಶೈಕ್ಷಣಿಕ ಮುಖ್ಯಸ್ಥೆ ಶ್ರೀ ಲಕ್ಷ್ಮೀ ಸಂಸ್ಥೆಯ ಅಧ್ಯಕ್ಷ ಸುಬ್ಬಸ್ವಾಮಿ, ಪ್ರಾಂಶುಪಾಲ ಕೆ.ಎಸ್.ನಂದೀಶ್, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಹಾಜರಿದ್ದರು.



# ಭಯವಿಲ್ಲದೆ ಪರೀಕ್ಷೆ ಎದುರಿಸಲು ಮುನ್ನೆಚ್ಚರಿಕೆ ಕ್ರಮ

## ಆರೋಗ್ಯ ಇಲಾಖೆಯಿಂದ ಅಂಬುಲೆನ್ಸ್ ಸೇವೆ - ಪೊಲೀಸ್ ಇಲಾಖೆಯಿಂದ ಭದ್ರತಾ ವ್ಯವಸ್ಥೆ

• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳು ಯಾವುದೇ ಭಯವಿಲ್ಲದೆ ಸುಗಮವಾಗಿ ಪರೀಕ್ಷೆ ಬರೆಯಲು ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಎಂದು ಪ್ರಾಂಶುಪಾಲ ವೆಂಕಟೇಶ್ ಅವರು ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರೀಕ್ಷಾ ಕೇಂದ್ರ ಸಂಖ್ಯೆ -4210ರಲ್ಲಿ ಒಟ್ಟು 499 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿತರಾಗಿದ್ದು, ತಾಲೂಕಿನ ಹಾನುಬಾಳು ಕಾಲೇಜು, ಯಸಳೂರು ಕಾಲೇಜು, ಹೆತ್ತೂರು ಕಾಲೇಜು, ಅಚೀವರ್ಸ್ ಕಾಲೇಜು, ಸ್ಟಿಯರ್ ಕಾಲೇಜು, ಸೆಂಟ್ ಆಗ್ನೆಸ್ ಕಾಲೇಜು ಹಾಗೂ ಬಾಲಕೀಯರ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳು ಇಲ್ಲಿ ಪರೀಕ್ಷೆ ಬರೆಯುತ್ತಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕುಡಿಯುವ ನೀರು, ಸೂಕ್ತ ಆಸನ ವ್ಯವಸ್ಥೆ, ಆರೋಗ್ಯ ಇಲಾಖೆಯಿಂದ ಅಂಬುಲೆನ್ಸ್ ಸೇವೆ ಹಾಗೂ ಪೊಲೀಸ್ ಇಲಾಖೆಯಿಂದ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿದೆ. ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ, ಸಂತೋಷದಿಂದ ಪರೀಕ್ಷೆ ಎದುರಿಸಬೇಕು ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಿಕ್ಷಕ ಸುಧಾಕರ್ ಬಾಬು, ದ್ವಿತೀಯ ಪಿಯುಸಿ ಪರೀಕ್ಷೆಗೆ ಆಗಮಿಸಿದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸ್ವಾಗತ ಕೋರಿದರು. ಪರೀಕ್ಷೆಯನ್ನು ಹಬ್ಬದ ಮನೋಭಾವದಿಂದ ಶಾಂತವಾಗಿ ಬರೆಯುವಂತೆ ಸಲಹೆ ನೀಡಿದರು. ಪರೀಕ್ಷಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದ ಅವರು, ಹಾಲ್ ಟಿಕೆಟ್, ನೋಂದಣಿ ಪತ್ರ ಹಾಗೂ ಗುರುತಿನ ಚೀಟಿ ಹೊರತುಪಡಿಸಿ ಬೇರೆ ಯಾವುದೇ ವಸ್ತುಗಳನ್ನು ಪರೀಕ್ಷಾ ಕೊಠಡಿಗೆ ತೆಗೆದುಕೊಂಡು ಹೋಗಬಾರದು ಎಂದು ತಿಳಿಸಿದರು.

ಬುರ್ಕಾ ಸೇರಿದಂತೆ ಮೇಲ್ವಸ್ತ್ರ ಧರಿಸಿರುವ ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದ್ದು, ಮೊಬೈಲ್ ಫೋನ್ ಹಾಗೂ ಬ್ಯಾಗ್‌ಗಳನ್ನು ಪರೀಕ್ಷಾ ಕೊಠಡಿ ಒಳಗೆ ತರಲು ಅನುಮತಿ ಇಲ್ಲ ಎಂದು ಎಚ್ಚರಿಸಿದರಲ್ಲದೆ, ವಿದ್ಯಾರ್ಥಿಗಳು ತಮ್ಮ ಬ್ಯಾಗ್‌ಗಳನ್ನು ಕಾಲೇಜು ಆವರಣದಲ್ಲಿ ನಿಗದಿತ ಸ್ಥಳದಲ್ಲಿ ಇಡಬೇಕು ಎಂದು ಹೇಳಿದರು.

ಶನಿವಾರ ನಡೆದ ಕನ್ನಡ ಪ್ರಥಮ ಭಾಷೆ ಪರೀಕ್ಷೆಗೆ 17 ಖಾಸಗಿ ವಿದ್ಯಾರ್ಥಿಗಳು ಸೇರಿ ಒಟ್ಟು 424 ವಿದ್ಯಾರ್ಥಿಗಳು ಹಾಜರಾಗಬೇಕಿದ್ದು, 18 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ. ಉಳಿದ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ ಎಂದು ಕೇಂದ್ರ ಅಧಿಕಾರಿ ಉಪನ್ಯಾಸಕ ದೇವರಾಜ್ ಅವರು ತಿಳಿಸಿದರು.



# ಪಿಯುಸಿ ಪರೀಕ್ಷೆ: ಮೊದಲ ದಿನ ಸುಸೂತ್ರ

» ಮೊದಲನೇ ಪುಟದಿಂದ

ಜಿಲ್ಲಾ ಮಟ್ಟದ ಅಧಿಕಾರಿಗಳ ತಂಡಗಳು ವಿವಿಧ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದವು.

ಜಿಲ್ಲೆಯಾದ್ಯಂತ ಆರಂಭಗೊಂಡ ಮೊದಲ ದಿನದ ದ್ವಿತೀಯ ಪಿಯುಸಿ ಕನ್ನಡ ಪರೀಕ್ಷೆ ಯಾವುದೇ ಗೊಂದಲವಿಲ್ಲದೆ ಶಾಂತಿಯುತವಾಗಿ ಹಾಗು ಪಾರದರ್ಶಕವಾಗಿ ನಡೆಯಿತು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಗಂಗಾಧರ್ ಅವರು ತಿಳಿಸಿರು.

**ಪರೀಕ್ಷಾ ಕೇಂದ್ರಗಳ ತಪಾಸಣೆ:**

ಪೊಲೀಸ್ ಬಂದೋಬಸ್ತ್‌ನಲ್ಲಿ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ರವಾನೆಯಾಗುತ್ತಿದ್ದಂತೆ, ತಪಾಸಣೆಗಾಗಿ ನಿಯೋಜನೆಗೊಂಡಿದ್ದ ಸ್ಥಾನಿಕ ಜಾಗೃತದಳ, ಸಂಚಾರಿ ಜಾಗೃತ ದಳದಿಂದ ಸೂಕ್ಷ್ಮವಾಗಿ ತಪಾಸಣೆ ನಡೆಯಿತು. ಜಿಲಾಧಿಕಾರಿ ಕೆ.ಎಸ್. ಲತಾಕುಮಾರಿ, ಸಂಸದ ಶ್ರೇಯಸ್ ಪಟೇಲ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಗಂಗಾಧರ್ ಸೇರಿ ಸಂಬಂಧಪಟ್ಟ ಅಧಿಕಾರಿಗಳು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ತಪಾಸಣೆ ನಡೆಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಆರೋಗ್ಯ ಇಲಾಖೆಯಿಂದ ವೈದ್ಯಕೀಯ ಸೌಲಭ್ಯಗಳ ಒದಗಿಸಲಾಗಿತ್ತು.

## ಆಧುನಿಕತೆ ಎಲ್ಲಾ ರಂಗಗಳಲ್ಲೂ ಬಂದಿದ್ದರೂ ನೆಮ್ಮದಿ, ಶಾಂತಿ ಇಲ್ಲ: ಕಸಾಪ ಜಿಲ್ಲಾಧ್ಯಕ್ಷ ಮಲ್ಲೇಶಗೌಡ

# ಹಳ್ಳಿಗಳ ಬದಲಾವಣೆಯಿಂದ ಜಾನಪದ ಕಲೆ ನಾಶ

• ಪ್ರಜೋದಯ ವರದಿ

**ಹಾಸನ:** ಪ್ರಸ್ತುತ ದಿನಮಾನಗಳಲ್ಲಿ ಹಳ್ಳಿಗಳು ಪಟ್ಟಣವಾಗಿ ಬದಲಾಗುತ್ತಿದ್ದು, ಇದರಿಂದ ನಮ್ಮ ಜಾನಪದ ಕಲೆ ನಶಿಸಿ ಹೋಗಲು ಕಾರಣವಾಗುತ್ತಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ. ಎಚ್.ಎಲ್.ಮಲ್ಲೇಶಗೌಡ ಅವರು ಹೇಳಿದರು.

ತಾಲ್ಲೂಕಿನ ಕೊಮ್ಮೆನಹಳ್ಳಿ ಗ್ರಾಮದಲ್ಲಿ ನಗರದ ಬೆಸ್ಟ್ ಪ್ರಥಮ ದರ್ಜೆ ಕಾಲೇಜು ವತಿಯಿಂದ ಹಮ್ಮಿಕೊಂಡಿರುವ ಎನ್.ಎಸ್.ಎಸ್. ವಾರ್ಷಿಕ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಮ್ಮ ಪೂರ್ವಜರು ನಮಗೆ ಕಟ್ಟಿ ಕೊಟ್ಟ ಕಲೆ, ಸಂಸ್ಕೃತಿ, ಆಚಾರ ವಿಚಾರಗಳು ಇಂದು ನಶಿಸಿ ಹೋಗುತ್ತಿವೆ, ಗ್ರಾಮೀಣ ಭಾಗದಲ್ಲಿನ ಹಳ್ಳಿಗಳಲ್ಲಿ ಪಟ್ಟಣದ ಆಚಾರ ವಿಚಾರಗಳು ಬರಲು ಆರಂಭವಾಗಿದೆ. ಆಧುನಿಕವಾಗಿ ಹಿಂದೆ ಇದ್ದ ವೇಳೆ ಮನುಷ್ಯ ನೆಮ್ಮದಿಯಾಗಿ ಶಾಂತಿಯುತವಾಗಿ ಬದುಕುತ್ತಿದ್ದ, ಆದರೇ ಆಧುನಿಕತೆ ಇಂದು ಎಲ್ಲಾ ರಂಗಗಳಲ್ಲೂ ಬಂದಿದೆ. ಆದರೆ, ಮನುಷ್ಯನಿಗೆ ನೆಮ್ಮದಿ, ಶಾಂತಿ ಎಂಬುವುದು ಇಲ್ಲ. ಪೂರ್ವಜರು ತಮ್ಮ ಕೆಲಸದಲ್ಲಿ ನೆಮ್ಮದಿಯನ್ನು ಕಂಡುಕೊಳ್ಳುತ್ತಿದ್ದರು, ಆದರೆ, ಇಂದು ನಾವುಗಳು ಕೆಲಸವನ್ನು ಮಾಡದೆ ಕೆಲಸ ಕದಿಯುವಲ್ಲಿ ನೆಮ್ಮದಿ ಕಾಣಲು ಹೋರಟಿದ್ದೇವೆ ಎಂದು ವಿಷಾದಿಸಿದರು.

ನಮ್ಮ ಹಿಂದಿನ ಜಾನಪದರು ನಮಗೆ ಹಲವು ಒಳ್ಳೆಯ ಆಚಾರ ವಿಚಾರಗಳನ್ನು ಬಿಟ್ಟು ಹೋಗಿದ್ದಾರೆ. ಅವುಗಳನ್ನು ಉಳಿಸಿ ಬೆಳೆಸುವ ಕೆಲಸ ಆಗಬೇಕಿದೆ. ಯುವ ಪೀಳಿಗೆ ಕೇವಲ ವಿದ್ಯಾವಂತರಾದರೆ ಸಾಲದು ನಮ್ಮ ಪೂರ್ವಜರು ನಮ್ಮ ಕಟ್ಟಿಕೊಟ್ಟಿರುವ ಕಲೆ, ಸಂಸ್ಕೃತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಜೀವನದಲ್ಲಿ ಮಾನವೀಯ ಗುಣಗಳನ್ನು ಬೆಳೆಸಿಕೊಂಡು ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗುವುದರೊಂದಿಗೆ ಉತ್ತಮ ಸಮಾಜವನ್ನು ನಿರ್ಮಾಣ ಮಾಡುವಲ್ಲಿ ಶ್ರಮಿಸಬೇಕಿದೆ ಎಂದರು.

ಹಾಸನ ವಿಶ್ವವಿದ್ಯಾಲಯದ ಕುಲಸಚಿವ (ಪರೀಕ್ಷಾಂಗ) ನಾಗರಾಜು ಅವರು ಮಾತನಾಡಿ, ಮಕ್ಕಳಿಗೆ ನಾಲ್ಕು ಗೋಡೆಗಳ ನಡುವಿನ ಶಿಕ್ಷಣಕ್ಕಿಂತ ಜೀವನದ ವಾಸ್ತವದಲ್ಲಿ ನಡೆಯುವ ಸಂಗತಿಗಳನ್ನು ತಿಳಿಸಿ ಶಿಕ್ಷಣ ಹೇಳಿಕೊಡುವುದು ಅಗತ್ಯ. ಅಬ್ದುಲ್ ಕಲಾಂ, ಸರ್ ಎಂ.ವಿಶ್ವೇಶ್ವರಯ್ಯ ಅವರಂತಹ ಮಹಾನ್ ವ್ಯಕ್ತಿಗಳನ್ನು ಯುವಕರು ಸ್ಫೂರ್ತಿಯಾಗಿ ತೆಗೆದುಕೊಳ್ಳಬೇಕು. ನಮ್ಮ ಹಿಂದಿನ ಕಲೆ, ಸಂಸ್ಕೃತಿ, ಮಾನವೀಯ ಮೌಲ್ಯಗಳನ್ನು ಇಂದಿನ ಮಕ್ಕಳಿಗೆ ತಿಳಿಸಿಕೊಡಬೇಕು ಎಂದು ಹೇಳಿದರು.

ಮೊಬೈಲ್ ಬಳಕೆಯಿಂದ ಇಂದಿನ ಮಕ್ಕಳನ್ನು ಹೊರತರುವುದು ಎಲ್ಲರಿಗೂ ಕಷ್ಟಕರವಾಗಿದೆ. ವಿದ್ಯಾರ್ಥಿ ಗಳು ತಮ್ಮ 21 ವರ್ಷದ ವರೆಗೂ ಅಹಿಂಸ ತತ್ವವನ್ನು ಪಾಲನೆ ಮಾಡಬೇಕು. ಶಾಂತಿ ಪಾಲನೆಯಿಂದ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ ಹಾಗಾಗಿ ಓದುವ ವಯಸ್ಸಿನಲ್ಲಿ ಗುರು-ಹಿರಿಯರನ್ನು ಗೌರವಿಸುವ ಗುಣ ಬೆಳೆಸಿಕೊಂಡು ಉತ್ತಮ ವ್ಯಕ್ತಿಗಳಾಗಬೇಕು ಎಂದರು.

ಬಿ.ಜಿ.ಎಸ್. ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸಿ.ಎಸ್. ಮೋಹನ್ ಮಾತನಾಡಿ, ಮಹಾತ್ಮ ಗಾಂಧೀಜಿ ಅವರ ಕನಸಿನ ಕೂಸು ರಾಷ್ಟ್ರೀಯ ಸೇವಾ ಯೋಜನೆ ಇದಾಗಿದ್ದು, 35 ಲಕ್ಷ ಶಿಬಿರಾರ್ಥಿಗಳು ಇದ್ದಾರೆ. ಮೈಸೂರು-ಹಾಸನ 148 ಕಾಲೇಜುಗಳಲ್ಲಿ 19 ಸಾವಿರ ವಿದ್ಯಾರ್ಥಿಗಳು ಇದ್ದಾರೆ. ವ್ಯಕ್ತಿತ್ವದ ವಿಕಾಸಕ್ಕೆ ಹಾಗೂ ಯುವಕರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುತ್ತದೆ ಎಂದು ಹೇಳಿದರು.

ಹಾಸನ ಹಾಲು ಒಕ್ಕೂಟದ ಹಣಕಾಸು ವಿಭಾಗದ ವ್ಯವಸ್ಥಾಪಕಿ ಸೌಜನ್ಯ, ಹೊಳೆನರಸೀಪುರ ಪ್ರಥಮ ದರ್ಜೆ ಕಾಲೇಜು ಸಹ ಪ್ರಾಧ್ಯಾಪಕ ಡಾ.ಎಚ್.ಎನ್. ಹರೀಶ್, ಹಾಸನ ಮಹಿಳಾ ಕಾಲೇಜು ಸಹ ಪ್ರಾಧ್ಯಾಪಕ ಬಿ.ಪಿ. ಜಗದೀಶ್, ಬೆಸ್ಟ್ ಪ್ರಥಮ ದರ್ಜೆ ಕಾಲೇಜು ಆಡಳಿತಾಧಿಕಾರಿಗಳಾದ ಡಾ. ವಿಕ್ರಂ, ಡಾ. ನಿತ್ಯಾನಂದ, ಪ್ರಾಂಶುಪಾಲ ಕೆ.ಸಿ. ನವೀನ್, ಸಚ್ಚಿನ್, ದಿಲೀಪ್‌ಕುಮಾರ್, ಅಧ್ಯಾಪಕ ಗಗನ್, ಕಚೇರಿ ಸಿಬ್ಬಂದಿ ಶರತ್, ಬೆಸ್ಟ್ ಪಿಯು ಕಾಲೇಜು ಪ್ರಾಂಶುಪಾಲ ಮಧು ಇನ್ನಿತರರು ಹಾಜರಿದ್ದರು.



ಕರ್ನಾಟಕ ಸರ್ಕಾರ
**ತಾಲ್ಲೂಕು ಪಂಚಾಯತಿ ಕಾರ್ಯಾಲಯ, ಆಲೂರು, ತಾಲ್ಲೂಕು, ಹಾಸನ ಜಿಲ್ಲೆ.**
ದೂರವಾಣಿ ಸಂಖ್ಯೆ: 08170-218229 ಇ-ಮೇಲ್:alurtp@gmail.com
ಸಂ.ತಾ.ಪಂ.(ಆ)ನರೇಗ/01/2025-26 ದಿನಾಂಕ:23-02-2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಆಲೂರು ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕರು (ಗ್ರಾ.ಉ) ರವರಿಗೆ ಸರ್ಕಾರಿ ಕಾರ್ಯನಿಮಿತ್ತ ಒಂದು ವರ್ಷದ ಅವಧಿಗೆ ಖಾಸಗಿ ವಾಹನವನ್ನು ಬಾಡಿಗೆ ಆದಾರದಲ್ಲಿ ಟಾಟಾ ಇಂಡಿಕಾ/ಟಾಟಾ ಇಂಡಿಗೋ/ ಟಾಟಾಸುಮ/ ಬುಲೋರೋ/ ಮಾರುತಿ ಸ್ವಿಫ್ಟ್ ಡಿಸೈರ್/ಮಾರುತಿ ಸ್ವಿಫ್ಟ್ ಸ್ವಿಟ್/ಮಾರುತಿ ಟೂರ್ಸ್ ವಾಹನ ಪೂರೈಸಲು ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನವನ್ನು ಒದಗಿಸಲು ಅರ್ಹ ಟ್ರಾವೆಲ್ ಏಜೆನ್ಸಿಗಳಿಂದ ಟೆಂಡರ್ ಕರೆಯಲಾಗಿದೆ. 1.ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ ತಾ.ಪಂ(ಆ)ನರೇಗಾ/01/2025-26 ದಿನಾಂಕ:-23-02-2026 2.ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ. 4.20 ಲಕ್ಷ 3.ಖಾಲಿ ಟೆಂಡರ್ ಫಾರಂಗಳನ್ನು ಫಾರಂಗಳನ್ನು ಕಛೇರಿ ವೇಳೆ ದಿನಾಂಕ: 23-02-2026 ರಿಂದ 03-03-2026 ಸಂಜೆ 04.30 ರವರೆಗೆ ಕಛೇರಿ ವೇಳೆಯಲ್ಲಿ ವಿತರಿಸಲಾಗುವುದು. (ಸಾರ್ವತ್ರಿಕ ರಜಾ ದಿನಗಳು ಹೊರತುಪಡಿಸಿ) 4.ಭರ್ತಿ ಮಾಡಿದ ಟೆಂಡರ್ ಫಾಪಂಗಳನ್ನು ಸಲ್ಲಿಸಲು ಕಡೆಯ ದಿನಾಂಕ ದಿನಾಂಕ : 04-03-2026 ರಂದು ಸಂಜೆ 04.30 ರೊಳಗೆ ಕಛೇರಿಗೆ ತಲುಪುವಂತೆ ಸಲ್ಲಿಸುವುದು 5.ತಾಂತ್ರಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ ದಿನಾಂಕ :05-03-2026 ರಂದು ಬೆಳಿಗ್ಗೆ 11.00 ಘಂಟೆಗೆ ತಾಲ್ಲೂಕು ಪಂಚಾಯಿತಿ, ಕಛೇರಿ ಆಲೂರು 6.ಆರ್ಥಿಕ ಬಿಡ್ ತೆರೆಯುವ ವೇಳೆ, ದಿನಾಂಕ ಮತ್ತು ಸ್ಥಳ ದಿನಾಂಕ :06-03-2026 ರಂದು ಮದ್ಯಾಹ್ನ 12.30 ಘಂಟೆಗೆ ತಾಲ್ಲೂಕು ಪಂಚಾಯಿತಿ, ಕಛೇರಿ ಆಲೂರು 7.ಟೆಂಡರ್ ನೋದಣಿ ಪಾವತಿಬೇಕಾದ ಇ.ಎಂ.ಡಿ ಮೊತ್ತ ರೂ.10,500/- 8.ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಕಛೇರಿ ಆಲೂರು ದೂ.ಸಂಖ್ಯೆ-9480867105

ಸಹಿ/-ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಆಲೂರು.

ವಾಸಾಸಂಇ/ಹಿಸನಿ/ಹಾಸನ/1120/ಕೆಎಸ್ಎಂಸಿಎ/2025-26

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

C M Y K
C M Y K
C M Y K
C M Y K